


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

SK NEWS ಕನ್ನಡ

Volume : 06 | Issue : 273 | Tuesday 09-07-2024 | E-mail : maruti.b.hosamani76@gmail.com | Page: 4 | Price : Rs. 1/-


## ಭಾರತೀಯ ಬೌದ್ಧ ಮಹಾ ಸಭಾ ವತಿಯಿಂದ ದಲಿತರ ಕೇರಿಗಳಿಗೆ ದಮ್ಮ ದೀಪ ಪಂಚಶೀಲ ಪಾದಯಾತ್ರೆ



**ಬಳ್ಳಾರಿ:** ಭಾರತೀಯಬೌದ್ಧಸಮಿತಿ ಜಿಲ್ಲಾಬಳ್ಳಾರಿವತಿಯಿಂದದಿನಾಂಕ 7/7/2024 ರಂದು ಧಮ್ಮ ದೀಪ ಮತ್ತುಪಂಚಶೀಲಪಾದಯಾತ್ರೆಯ ಕಾರ್ಯಕ್ರಮವನ್ನು ಬಳ್ಳಾರಿ ಜಿಲ್ಲೆಯಾದ್ಯಂತ ಆಯಾ ತಾಲೂಕಿನಲ್ಲಿ ಇರುವಂತ ನಗರ ಹಳ್ಳಿ ಗ್ರಾಮಗಳಿಗೆ ಹೋಗಿ ದಲಿತ ಜನರಿಗೆ ಬೌದ್ಧ ಧರ್ಮದ ಬಗ್ಗೆ ಅರಿವು ಮೂಡಿಸಲಿಕ್ಕಾಗಿ ಪ್ರಚಾರ ಮಾಡಬೇಕಾಗಿದ್ದ ರಿಂದ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನು ಬಳ್ಳಾರಿ ನಗರದ ಡಾ. ಬಿ ಆರ್ ಅಂಬೇಡ್ಕರ್ ಭವನದಲ್ಲಿ ಕರೆಯಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಂತಶ್ರೀಮುಂಡರಗಿ ನಾಗರಾಜ್ ಅಧ್ಯಕ್ಷರು ಡಾ ಬಾಬು ಜಗಜೀವನರಾಮ್ ಚರ್ಮ ಶಿಲ್ಪಿ ಅಭಿವೃದ್ಧಿ ಮಂಡಳಿ ಬೌದ್ಧ ಧರ್ಮ 2 ಸಾವಿರ ವರ್ಷಗಳ ಹಿಂದೆಯೇ ಎಲ್ಲಾರೂ ಒಂದೇ ಎಂಬುದನ್ನು ವಿಶ್ವಕ್ಕೆ ಸಾದರ ಪಡಿಸಿದ ಬೌದ್ಧ ಧರ್ಮ ಎಲ್ಲಾ ಧರ್ಮಗಳಿಗಿಂತಲೂ ಶ್ರೇಷ್ಠ ಧರ್ಮ ಆಗಿದೆ ಬೌದ್ಧ ಧರ್ಮದ ಚರಿತ್ರೆಯನ್ನು ಸವಿಸ್ತಾರವಾಗಿ ಮಾತನಾಡಿದರು. ಹಾಗೂ ಸಂವಿಧಾನ ಶಿಲ್ಪಿ ಭಾರತರತ್ನ ವಿಶ್ವ ಜ್ಞಾನಿ ಬೋಧಿ ಸತ್ವ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬೌದ್ಧ ಧರ್ಮವನ್ನು ಮಹಾರಾಷ್ಟ್ರದ ನಾಗಪೂರಿನಲ್ಲಿ 1956 ರಲ್ಲಿ ಸುಮಾರು 910 ಲಕ್ಷ ಜನರೊಂದಿಗೆ ಬೌದ್ಧ ಧರ್ಮ ದೀಕ್ಷವನ್ನು ಸ್ವೀಕರಸಿದ ರಿಂದ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯಂತೆ ಇಂದು ಬದಲಾವಣೆ ನಾವು ನೀವು ಎಲ್ಲಾರೂ ಬೌದ್ಧ ಧರ್ಮದ ದಿಕ್ಕಿನ ಕಡೆಗೆ ಹೋಗಬೇಕಾಗಿ ಇರುವುದು ಅವಶ್ಯಕತೆ ನಮ್ಮೆಲ್ಲರದಾಗಿದೆ. ಹಾಗೂ ಬಳ್ಳಾರಿಯಲ್ಲಿ ಹನುಮೇಶಪ್ಪ (ಕಮಲ್ ರತ್ನ) ಬಂತೇಜಿ ಆಗಿರುವುದು ಸಂತೋಷದ ಸಂಗತಿ ಬೌದ್ಧ ಧರ್ಮದ ಪ್ರಕಾರ ಜಿಲ್ಲೆಯಲ್ಲಿ ಯಾವುದೇ ಕಾರ್ಯಕ್ರಮ ಮಾಡಿದರು ಇವರನ್ನು ಕರಿಸಿ ಕೊಂಡು ಮಾಡಬೇಕೆಂದು ಹೇಳಿದರು ಮತ್ತು 2 ಅಡಿಯ ಬುದ್ಧನ ಮೂರ್ತಿಯನ್ನು ಹನುಮೇಶಪ್ಪಕಮಲ್‌ರತ್ನಬಂತೆ-ಜಿಗೆ ದಾನಾರ್ಥವಾಗಿ ನೀಡಿದರು. ಹನುಮೇಶಪ್ಪ ಕಮಲ್ ರತ್ನ ಬಂತೆ ಜಿಜಿಲ್ಲಾಧ್ಯಕ್ಷರುಭಾರತೀಯಬೌದ್ಧ ಮಹಾಸಭಾ ಬುದ್ಧನ ಪಂಚಶೀಲ ಬೋಧಿಸಿದರು ಹಾಗೂ ಮುಂದೆ ನಾನು ತಾಲೂಕಿನ ಅತ್ಯಂತ ಬೌದ್ಧ ಧರ್ಮದ ಬಗ್ಗೆ ಪ್ರಚಾರದ ಸಮಯದಲ್ಲಿ ಎಲ್ಲಾ ದಲಿತ ಸಂಘಟನೆಗಳ ಮುಖಂಡರು ಕಾರ್ಯಕರ್ತರು ನನಗೆ ಸಹಕರಿಸಿ ಕೊಟ್ಟಾಗ ಮಾತ್ರ ನಮ್ಮ ಮುಖಂಡರ ಎಲ್ಲಾರ ಸಹಕಾರ ಇನ್ನೂ ಮುಂದೆ ನನಗೆ ಸದಾ ಕಾಲವಾಗಿ ಇದ್ದಾಗ ಮಾತ್ರ ನಾನು ಬೌದ್ಧ ಧರ್ಮವನ್ನು ಪ್ರಚಾರ ಮಾಡಲಿಕ್ಕೆ ಅನುಕೂಲವಾಗುತ್ತದೆ ತಾವು ಯಾವುದೇ ಸಹಕಾರ ಮತ್ತು ಸಹಾಯ ಮಾಡಿ ಕೊಡುತ್ತೀರೆ-ಂದು ನನಗೆ ದಲಿತ ಮುಖಂಡರಲ್ಲಿ ಬಹಳಷ್ಟು ವಿಶ್ವಾಸವಿದೆ ಎಂದು ದಲಿತ ಮುಖಂಡರಲ್ಲಿ ಮನವಿ ಮಾಡಿ ಕೊಂಡರು ಶ್ರೀಎಂ ಎರೆಣ್ಣ ನಿವೃತ್ತಿ ಬ್ಯಾಂಕಿನ ವ್ಯವಸ್ಥಾಪಕರು ಮಾತನಾಡಿದರು. ಶ್ರೀಮತಿ ಡಿ ಯಂಕಮ್ಮ ಕಾರ್ಯಕ್ರಮವನ್ನು ಉದ್ದೇಶಿಸಿಬೌದ್ಧಧರ್ಮದಸರಳತೆ ಮತ್ತು ಅನುಕರಣೆಯಾಗಿದು ಜಗತ್ತಿಗೆ ಶಾಂತಿ ತೋರಿದ ಧರ್ಮವಾಗಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದಂತ. ಸ್ವರೂಪ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಭಾರತೀಯ ಬೌದ್ಧ ಮಹಾ ಸಭಾ ಡಾ ಮೋರೆ ಬೀದರ್ ಬೌದ್ಧ ಉಪಸಕರುಕೆಶಂಕರ್‌ನಂದಿಹಾಳ್ ಜಿಲ್ಲಾಪ್ರಧಾನಕಾರ್ಯದರ್ಶಿಗಳು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಲಕ್ಷ್ಮಣ ಜಿಲ್ಲಾ ಕಾನೂನು ಸಲಹೆಗಾರರು ಭಾರತೀಯ ಬೌದ್ಧ ಮಹಾಸಭಾ ಶೇಖರಪ್ಪ ನಿರ್ದೇಶಕರು ಭೀಮರಾವ್ ತರಬೇತಿ ಕೇಂದ್ರ ಬಳ್ಳಾರಿ ಇನ್ನಿತರರು ಭಾಗವಹಿಸಿದ್ದರು.

**ಜಿಲ್ಲಾ ವರದಿಗಾರರು ಹಾಗೂ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎಚ್.ಎಮ್.ಟಿ ರಾಜಕುಮಾರ್.ಬಳ್ಳಾರಿ.**

## ಡಾ. ಭೀಮ್ ರಾವ್ ಅಂಬೇಡ್ಕರ್ ಸೈನ್ಯ (ರಿ) ಕರ್ನಾಟಕ ಸಂಘಟನೆಯ ರಾಜ್ಯ ಅಧ್ಯಕ್ಷರಾಗಿ ಪರಶುರಾಮ್ ಚಿನಗುಂಡಿ ಆಯ್ಕೆ




**ಚಿನಗುಂಡಿ :** ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಚಿನಗುಂಡಿ ಗ್ರಾಮದ ಶ್ರೀ ಪರಶುರಾಮ್ ಕಾಂಬಳೆ ಅವರನ್ನು ಇಂದು ಡಾ, ಭೀಮರಾವ್ ಅಂಬೇಡ್ಕರ್ ಸೇನೆ (ರಿ) ಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಪರಶುರಾಮ್ ಚಿನಗುಂಡಿ ಎಂದೆ ಹೆಸರು ವಾಸಿಯಾದ ಇವರು ಹಲವಾರು ಸಮಾಜ ಮುಖಿ ಕೆಲಸಗಳನ್ನು ಮಾಡುತ್ತಾ ಬಡವರಿಗೆ ದೀನ ದಲಿತರಿಗೆ ತುಂಬಾ ಸಹಾಯಗಳನ್ನ ಮಾಡುತ್ತಾ ಬಂದಿರುತ್ತಾರೆ. ಇವರ ಕೆಲಸ ಕಾರ್ಯಗಳನ್ನು ಮೆಚ್ಚಿ ನಮ್ಮ ಸಂಘಟನೆಯ ಎಲ್ಲಾ ಪದಾಧಿಕಾರಿಗಳು ಸೇರಿ ರಾಜ್ಯ ಘಟಕ ವತಿಯಿಂದ ಅವರ ಮನವಲಿಸಿ ಡಾ, ಭೀಮರಾವ್ ಅಂಬೇಡ್ಕರ್ ಸೇನೆ (ರಿ) ಕರ್ನಾಟಕ ಸಂಘಟನೆಯ ಮತ್ತು ಸಮಾಜದ ಅಭಿವೃದ್ಧಿಗಾಗಿ ಇಂತಹ ಯುವ ನಾಯಕರು, ಹೋರಾಟಗಾರರು,
ನೇರ ನುಡಿ, ನೇತಾರ, ದಿಟ್ಟ ನಾಯಕರು, ನಮ್ಮ ನಿಮ್ಮೆಲ್ಲರ ಪ್ರೀತಿಯ ಸಹೋದರ ಸಂಘಟನೆಯ ಚತುರ ಆಗಿರುವ ಪರಶುರಾಮ್ ಕಾಂಬಳೆ ಅವರು ನಮ್ಮ ಸಂಘಟನೆಗೆ ಅವಶ್ಯಕತೆ ಇರುವ ಕಾರಣ ಇವರನ್ನು ಎಲ್ಲ ರಾಜ್ಯ ಘಟಕ ವತಿಯಿಂದ ಹೃದಯ ಪೂರ್ವಕವಾಗಿ ಗೌರವಿಸಿ ಸಂಘಟನೆಗೆ ಜೈ ಭೀಮ್ ಸ್ವಾಗತಿಸಿ ಕೊಳ್ಳುತ್ತೇವೆ. ಎಂದು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

**ತಾಲೂಕ ವರದಿಗಾರರು ಹಾಗೂ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್ ವಾಯ್ ಕಿಳ್ಳಿ ಇಲಕಲ್ಲ.**

## ಮೊಹರಂ ಹಬ್ಬದ ಶಾಂತಿ ಯುತವಾಗಿ ಆಚರಣೆ ಮಾಡಲು ಪೂರ್ವ ಭಾವಿ ಸಭೆ



**ಕಂಪ್ಲಿ :** ಬಳ್ಳಾರಿ ಜಿಲ್ಲೆಯ ಕಂಪ್ಲಿ ಪಟ್ಟಣದ ಕಂಪ್ಲಿ ಪೊಲೀಸ್ ಠಾಣೆ ಪೊಲೀಸ್ ಇನ್ಸ್ಪೆಕ್ಟರ್ ಆದ ಶ್ರೀ ವಸುಕುಮಾರ್ ಇವರ ನೇತೃತ್ವದಲ್ಲಿ ಮೊಹರಂ ಹಬ್ಬದ ಆಚರಣೆಯ ಶಾಂತಿ ಸಭೆ ಹಮ್ಮಿ ಕೊಂಡಿ-ದ್ದು ಕಂಪ್ಲಿ ಪಟ್ಟಣದ ಸರ್ವ ಸಮುದಾಯದ ಮುಖಂಡರ ಉಪಸ್ಥಿತಿಯಲ್ಲಿ ಸಭೆ ನಡೆದಿದ್ದು. ಸಭೆಯಲ್ಲಿ ಮೊಹರಂ ಆಚರಣೆಯು ಹಿಂದೂ ಮುಸ್ಲಿಮಗಳ ಭಾವೈಕ್ಯತೆಯ ಆಚರಣೆಯಾಗಿದ್ದು. ಅಹಿತಕರ ಘಟನೆಗಳಿಗೆ ಅವಕಾಶ ನೀಡಿ-ದಂತೆ ಅವಶ್ಯಕತೆಗೆ ತಕ್ಕಂತೆ ಕಾನೂನು ಬದ್ಧವಾಗಿ ಸಂಬಂಧಪಟ್ಟ ಇಲಾಖೆಯಿಂದ ಮರಗಳನ್ನು ಕಡಿಯಲು ಅನುಮತಿ ಪಡೆದು ಆಚರಣೆ ಮಾಡಿ ಮತ್ತು ಕೋಮು ಗಲಭೆಗೆ ಅವಕಾಶ ನೀಡಿ-ದಂತೆ ಶಾಂತಿ ಯುತವಾಗಿ ಆಚರಿಸಲು ಮುಖಂಡರ ಜೊತೆಗೆ ಪೋಲಿಸ್ ಇನ್ಸ್ಪೆಕ್ಟರ್ ಮತ್ತು ಅವರ ಸಿಬ್ಬಂದಿಗಳ ಸಹಕಾರ ದೊಂದಿಗೆ ಆಚರಿಸಿ ಎಂದು ಸರ್ವರ ಒಪ್ಪಿಗೆ ಮೇರೆಗೆ ಶಾಂತಿ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು ಸಭೆಯಲ್ಲಿ ಹೆಮಯ್ಯ ಸ್ವಾಮಿ. ಬ್ರಹ್ಮಯ್ಯ. ಮಸ್ತಾನ್ ಹುಸೇನಪ್ಪ ಮೆಹಬೂಬ್ ಟಿ ಹೆಚ್ ಎಂ ರಾಜಕುಮಾರ ಪತ್ರಕರ್ತರೊಂದಿಗೆ ಇನ್ನಿತರೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಟಿ.ಎಚ್.ಎಂ ರಾಜಕುಮಾರ್.ಬಳ್ಳಾರಿ.**

## 7ನೇ ವೇತನ ಆಯೋಗ ಶೀಘ್ರ ಜಾರಿಗೆ ಒತ್ತಾಯಿಸಿ ಮನವಿ





**ಕೊಟ್ಟೂರು :** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ರಾಜ್ಯದ ಎಲ್ಲಾ 31 ಕಂದಾಯ ಜಿಲ್ಲೆ, 03 ಶೈಕ್ಷಣಿಕ ಜಿಲ್ಲೆ ಹಾಗು 183 ತಾಲೂಕುಗಳಲ್ಲಿ ಸಂಘದ ಶಾಖೆಗಳನ್ನು ಹೊಂದಿದ್ದು, ಸಮಸ್ತ 6.00 ಲಕ್ಷ ರಾಜ್ಯ ಸರ್ಕಾರಿ ನೌಕರರನ್ನು ಪ್ರತಿ ನಿಧಿಸುವ ಏಕೈಕ ಬೃಹತ್ ಸಂಘಟನೆ ಯಾಗಿದ್ದು, ಪ್ರಕೃತಿ ವಿಕೋಪ, ಉತ್ತರ ಕರ್ನಾಟಕದ ಪ್ರವಾಹ, ಕೋವಿಡ್ ಸಂಕಷ್ಟದಲ್ಲಿ ಸರ್ಕಾರಕ್ಕೆ ಆರ್ಥಿಕ ಸಹಕಾರ ನೀಡಿ ಸೇವಾ ಕಾರ್ಯ ನಿರ್ವಹಿಸುವ ಮೂಲಕ ದೇಶದಲ್ಲಿಯೇ ಮಾದರಿ ಸಂಘಟನೆ ಯಾಗಿದೆ. ಸರ್ಕಾರದ ಯೋಜನೆಗಳನ್ನು ಶ್ರೀಸಾಮಾನ್ಯರಿಗೆ ತಲುಪಿಸುವಲ್ಲಿ ಸರ್ಕಾರಿ ನೌಕರರ ಪಾತ್ರ ಪ್ರಮುಖವಾಗಿದೆ. ಇಂತಹ ಕಾರ್ಯಾಂಗದ ನೌಕರರ ಬೇಡಿಕೆಗಳನ್ನು ಈಡೇರಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ನೌಕರರ ಸಂಘದ ಕಾರ್ಯದರ್ಶಿ ಸಿದ್ದಪ್ಪನವರು ಮನವಿ ಮಾಡಿದರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕ ಘಟಕದ ಅಧ್ಯಕ್ಷರಾದ ಜಗದೀಶ ಇವರು 1) ರಾಜ್ಯ 7. ನೇ ವೇತನ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಿ ಆದೇಶ ಹೊರಡಿಸ ಬೇಕು.2) ಎನ್.ಪಿ.ಎಸ್. ರದ್ದುಪಡಿಸಿ ಹಳೇ ಪಿಂಚಣಿ ಯೋಜನೆಯನ್ನು ಮರು ಜಾರಿ ಗೊಳಿಸುವುದು.3) ಕರ್ನಾಟಕ ರಾಜ್ಯ ಆರೋಗ್ಯ ಸಂಜೀವಿನಿ ಯೋಜನೆ (ಕೆಎಎಸ್‌ಎಸ್)ಅನುಷ್ಠಾನಗೊಳಿಸುವುದು. ಈ 3 ಪ್ರಮುಖ ಬೇಡಿಕೆಗಳನ್ನು ಕೂಡಲೇ ಈಡೇರಿಸ ಬೇಕೆಂದು ಸರ್ಕಾರವನ್ನು ಒತ್ತಾಯಿಸಿ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಿಗೆ ಹಾಗೂ ತಹಶೀಲ್ದಾರರಾದ ಅಮರೇಶ ಜಿ ಕೆ ಇವರಿಗೆ ಮನವಿಯನ್ನು ಸಲ್ಲಿಸಿದರು.
ಈ ಸಮಯದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳು, ಖಜಾಂಚಿ ಬಸವರಾಜ, ಉಪಾಧ್ಯಕ್ಷರಾದ ಎಸ್.ಎಂ.ಗುರು ಬಸವರಾಜ, ಬಸವರಾಜ ಎಸ್‌ಎಸ್, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ-ಡಿ ಸಿದ್ದಪ್ಪ, ಕಾರ್ಯದರ್ಶಿ ಬಾಲಚಂದ್ರ ಜಿ, ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಅಧ್ಯಕ್ಷರಾದ ಜ್ಯೋತಿಬಾಯಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ-ನಾಗೇಶ್, ಸಂಘಟನಾ ಕಾರ್ಯದರ್ಶಿ-ರೇವಣಸಿದ್ದಪ್ಪ, ಮುತ್ತೇಶ್, ಸದಸ್ಯರಾದ ವಿನಯಕುಮಾರ್, ಎಂ ಶಿವಕುಮಾರ, ಕೆ.ಪುಷ್ಪಲತಾ , ತಾಲೂಕ ಕಛೇರಿಯ ಸಿಬ್ಬಂದಿಯವರು ಭಾಗವಹಿಸಿದ್ದರು.

**ತಾಲೂಕ ವರದಿಗಾರರು ಹಾಗೂ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್ ಕುಮಾರ್ ಸಿ ಕೊಟ್ಟೂರು**

## ಶ್ಯಾಮ ಪ್ರಸಾದರ ರಾಷ್ಟ್ರಪ್ರೇಮ ಆದರ್ಶವಾಗಲಿ: ಮಂಜುನಾಥ



**ತಾಳಿಕೋಟಿ :** ಖ್ಯಾತ ನ್ಯಾಯವಾದಿ ಶಿಕ್ಷಣ ತಜ್ಞ ಶ್ರೇಷ್ಠ ರಾಜಕಾರಣಿ ಹಾಗೂ ಪ್ರಖರ ಹಿಂದುತ್ವ ವಾದಿಗಳಾದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರು ದೇಶದ ಹಿತಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದ ಮಹಾನ್ ದೇಶಭಕ್ತ ಅವರ ರಾಷ್ಟ್ರಪ್ರೇಮ ನಮಗೆಲ್ಲರಿಗೂ ಆದರ್ಶವಾಗಬೇಕಾಗಿದೆ ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಶೆಟ್ಟಿ ಹೇಳಿದರು. ಶನಿವಾರ ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಅವರ 72 ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಿಜೆಪಿ ಮುಖಂಡ ಮಾನಸಿಂಗ ಕೊಕಟನೂರ ಮಾತನಾಡಿ ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರ ಸಂಪುಟದಲ್ಲಿ ಸಚಿವರಾಗಿದ್ದ ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಅವರು ದೇಶದ ಹಿತವನ್ನು ಮುಂದಿಟ್ಟು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. 1951 ರಲ್ಲಿ ಭಾರತೀಯ ಜನಸಂಘವನ್ನು ಕಟ್ಟಿದರು ಮುಂದೆ ಅದು ಭಾರತೀಯ ಜನತಾ ಪಕ್ಷವಾಯಿತು. ಹಿಂದುಗಳ ರಕ್ಷಣೆಗಾಗಿ ಅವರು ಜೈಲು ವಾಸವನ್ನು ಅನುಭಸಿದರು.
ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಮುನ್ನಡೆಯಬೇಕಾಗಿದೆ ಎಂದರು. ಕಾರ್ಯಕ್ರಮದ ಆರಂಭದಲ್ಲಿ ಡಾ.ಶ್ಯಾಮಪ್ರಸಾದ್ ಮುಖರ್ಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡರಾದ ಮುದುಕಪ್ಪ ಬಡಿಗೇರ. ರಾಘವೇಂದ್ರ ಚೌಹಾಣ.ರಾಮು ಜಗತಾಪ.ವಿಠಲ ಮೋಹಿತೆ. ಗುರುರಾಜ ಮಾನೆ. ಈಶ್ವರ ಹೂಗಾರ. ಮಲ್ಲು ಮೇಟಿ. ಸಂಗನಗೌಡ ಗಬಸಾವಳಗಿ.ಮುತ್ತು ಹಡಗಿನಾಳ ಹಾಗೂ ಕಾರ್ಯಕರ್ತರು ಇದ್ದರು.

## "ಆಯುರ್ವೇದದಲ್ಲಿ ಜಠರಾಗ್ನಿಯ ಪ್ರಾಮುಖ್ಯತೆ".....

ಆಯುರ್ವೇದದ ಗ್ರಂಥಗಳ ಪ್ರಕಾರ ಜಠರಾಗ್ನಿಯ ನಾವು ಸೇವಿಸಿದ ಆಹಾರದ ಪಚನ ಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.ಅಗ್ನಿಯುಪ್ರತಿಜೀವಕೋಶ,ಪ್ರತಿಅಂಗಾಂಶ ಮತ್ತು ದೇಹದೊಳಗಿನ ಪ್ರತಿಯೊಂದು ವ್ಯವಸ್ಥೆಯನ್ನು ಸಮತೋಲನ ದಲ್ಲಿಡುತ್ತದೆ. ಇದು ನಮ್ಮ ಜೀವಕೋಶಗಳಿಗೆ ಮತ್ತು ಅಂಗಾಂಶಗಳಿಗೆ ಯಾವ ಅವಷ್ಯಕ ಪದಾರ್ಥಗಳನ್ನು ಒದಗಿಸಬೇಕು ಹಾಗು ಯಾವ ಪದಾರ್ಥಗಳನ್ನು ತ್ಯಾಜ್ಯವಾಗಿ ತೆಗೆದು ಹಾಕಬೇಕು ಎಂಬುದನ್ನು ನಿರ್ಧರಿಸುತ್ತದೆ. ಹಾಗಾಗಿ ಜಠರಾಗ್ನಿಯನ್ನು ನಮ್ಮ ದೇಹದ ದ್ವಾರಪಾಲಕ ನೆಂದು ಕರೆಯಬಹುದು. ದುರ್ಬಲಗೊಂಡ ಅಗ್ನಿಯು ಎಲ್ಲಾ ದೇಹದ ಅಸಮತೋಲನ ಸ್ಥಿತಿ ಮತ್ತು ರೋಗಗಳನ್ನು ಉಂಟು ಮಾಡುವಲ್ಲಿ ಕಾರಣವಾಗಬಹುದು. ವಾಸ್ತವವಾಗಿ ಆಯುರ್ವೇದದ ಪ್ರಕಾರ ಅಗ್ನಿಯು ನಾಶವಾದಾಗ, ಶೀಘ್ರದಲ್ಲೇ ಸಾವು ಸಂಭವಿಸುತ್ತದೆ.

ಬನ್ನಿ ಅಗ್ನಿಯ ಅನೇಖ ಮುಖಗಳು ಮತ್ತು ಅದರ ಸಾರವನ್ನು ತಿಳಿಯೋಣ ಆಯುರ್ವೇದದ ಪ್ರಕಾರ ಸರಿ ಸುಮಾರು 40 ತರಹದ ಅಗ್ನಿಯ ಪ್ರಕಾರಗಳಿವೆ. ಎಲ್ಲಾ ಪ್ರಕಾರಗಳಿಗು ದೇಹದಲ್ಲಿ ಅದರೇ ಆದಂತಹ ಸ್ಥಾನ ಮತ್ತು ಚಯಾಪಚಯ ಕಾರ್ಯಗಳನ್ನು ನಿರ್ವಹಿಸುತ್ತವೆ. ಆ ಹ ಾ ರ ' ದ ' ಜೀರ್ಣಕ್ರಿಯೆ ಮತ್ತು ಸಮೀಕರಣವನ್ನು ನಿಯಂತ್ರಿಸುವ ಕೇಂದ್ರ ಜಠರಾಗ್ನಿಯ ಕೆಲಸ ಮತ್ತು ಎಲ್ಲಾ ಅಗ್ನಿಯಲ್ಲು ಇದು ಪ್ರಮುಖ ಪಾತ್ರ ವಹಿಸುತ್ತದೆ. ದೇಹದ ಜೀವಕೋಶಗಳು, ಅಂಗಾಂಶಗಳು ಮತ್ತು ಅಂಗಗಳಲ್ಲಿ ಸಂವೇದನಾ ಗ್ರಹಿಕೆ ಮತ್ತು ನಿರ್ದಿಷ್ಟ ಪೋಷಣೆಯಂತಹ ವಿಷಯಗಳನ್ನು ನಿಯಂತ್ರಿಸುವ ಅನೇಕ ಇತರ ಅಗ್ನಿ ಘಟಕಗಳಿವೆ.

ಜಠರಾಗ್ನಿಯ ಸ್ಥಳೀಕರಿಸಿದ ಅಭಿವ್ಯಕ್ತಿಗಳು ಜೀವಕೋಶದ ಪೊರೆಗಳನ್ನು ದಾಟಲು ಮತ್ತು ನಮ್ಮ ಆಓಂ ಯಲ್ಲಿ ಸೆಲ್ಯುಲಾರ್ ಮೆಮೊರಿಯನ್ನು ಕಾಪಾಡಿ ಕೊಳ್ಳಬಹುದು ಎಂಬುದನ್ನು ನಿರ್ಧರಿಸುತ್ತದೆ.

ಜಠರಾಗ್ನಿಯ ಗುಣಗಳು ಉಷ್ಣ, ತೀಕ್ಷ್ಣ, ಹಗುರ, ಒಳಹೊಕ್ಕುವ, ಹರಡುವ, ಸೂಕ್ಷ್ಮ, ಪ್ರಕಾಶಮಾನ ಮತ್ತು ಸ್ಪಷ್ಟಕಾರ್ಯ ಇವು ಗುಣಗಳಾಗಿರುತ್ತವೆ. ಜಠರಾಗ್ನಿಯ ನಮ್ಮ ದೇಹದಲ್ಲಿ ಮಾಡುವ ಕಾರ್ಯಗಳ ಆಹಾರದ ರೂಪಾಂತರ ಜೀರ್ಣಕ್ರಿಯೆ, ಹೀರಿ ಕೊಳ್ಳುವಿಕೆ, ಸಮೀಕರಣ ಜೀರ್ಣಕಾರಿ ಕಿಣ್ವಗಳ ರಚನೆ ಎಲ್ಲಾ ಚಯಾಪಚಯ ಕ್ರಿಯೆಗಳು ದೇಹಕ್ಕೆ ಶಕ್ತಿ ಮತ್ತು ಚೈತನ್ಯ ನೀಡುವುದು
ಅಂಗಾಂಶ ಪೋಷಣೆ ಓಜಸ್, ತೇಜಸ್ ಮತ್ತು ಪ್ರಾಣಗಳ ಉತ್ಪಾದನೆ ಚರ್ಮದ ಬಣ್ಣ, ಮೈಬಣ್ಣ, ಹೊಳಪು ಮತ್ತು ಕಾಂತಿಯನ್ನು ಕಾಪಾಡುವುದು. ದೇಹದ ಉಷ್ಣತೆಯ ನಿರ್ವಹಣೆ ಮಾನಸಿಕ ಸ್ಪಷ್ಟತೆ ಬುದ್ದಿಶಕ್ತಿಯ ನಿರ್ವಹಣೆ
ಸಂವೇದನಾ ಗ್ರಹಿಕೆ (ವಿಶೇಷವಾಗಿ ದೃಶ್ಯ ಗ್ರಹಿಕೆ)
ಸೆಲ್ಯುಲಾರ್ ಸಂವಹನದ ಹರಿವು ಜೀವನಕ್ಕಾಗಿ ಎಚ್ಚರ ದಿಂದಿರುವುದು, ವಾತ್ಸಲ್ಯ ಮತ್ತು ಉತ್ಸಾಹ
ಧೈರ್ಯ ಮತ್ತು ಆತ್ಮವಿಶ್ವಾಸ, ಸಂತೋಷ, ನಗು ಮತ್ತು ತೃಪ್ತಿ, ತಾರತಮ್ಯ, ಕಾರಣ ಮತ್ತು ತರ್ಕ, ತಾಳ್ಮೆ, ಸ್ಥಿರತೆ ಮತ್ತು ದೀರ್ಘಾಯುಷ್ಯ. ಆರೋಗ್ಯವಂತ ಜಠರಾಗ್ನಿ ಅಗ್ನಿಯು ಸಮತೋಲಿತವಾಗಿದ್ದಾಗ, ಅದು ಶರೀರದ ಬಲವಾದ ರೋಗ ನಿರೋಧಕ ಶಕ್ತಿ, ದೀರ್ಘ ಆರೋಗ್ಯಕರ ಜೀವನ, ಉತ್ಸಾಹ ಮತ್ತು ಜೀವನದ ಇಡೀ ಅನುಭವವನ್ನು ಆನಂದ ದಾಯಕವಾಗಿಸುತ್ತದೆ. ಸಮತೋಲಿತ ಅಗ್ನಿಯ ಪ್ರಮುಖ ಚಿಹ್ನೆಗಳು ಸಾಮಾನ್ಯ ಹಸಿವು (ಗಮನಿಸಿ: ಆರೋಗ್ಯಕರ ಹಸಿವು – ಲಘುತೆ, ಸ್ಪಷ್ಟತೆ ಮತ್ತು ಆಹಾರದ ಆಹ್ಲಾದಕರ ನಿರೀಕ್ಷೆಯನ್ನು ಒಳಗೊಂಡಿರುತ್ತದೆ, ಆದರೆ ತಿನ್ನುವ ತುರ್ತು ಅಗತ್ಯವಲ್ಲ). ಶುದ್ಧ ನಾಲಿಗೆ (ಲೇಪವಿಲ್ಲ) ರುಚಿಯ ಸರಿಯಾದ ಮೆಚ್ಚುಗೆ ಉತ್ತಮ ಜೀರ್ಣಕ್ರಿಯೆ, ಸಮತೋಲಿತ ಚಯಾಪಚಯ
ಸಮಸ್ಯೆಯಿಲ್ಲದೆ ಯಾವುದೇ ಆಹಾರವನ್ನು ಸಮಂಜಸವಾದ ಪ್ರಮಾಣದಲ್ಲಿ ಜೀರ್ಣಿಸಿ ಕೊಳ್ಳಬಹುದು
ಸರಿಯಾದ ಮತ್ತು ನಿಯಮಿತ ಮಲ ವಿಸರ್ಜನೆ
ವಾಕರಿಕೆಯ ಸಂಪೂರ್ಣ ಅನುಪಸ್ಥಿತಿ ಅಥವಾ ನಿಗ್ರಹಿಸಿದ ಹಸಿವು ಹೋಮಿಯೋಸ್ಟಾಸಿಸ್ ಅನ್ನು ಸುಲಭವಾಗಿ ನಿರ್ವಹಿಸುತ್ತದೆ ಸ್ಥಿರ ಆರೋಗ್ಯ, ಸ್ಥಿರ ತೂಕ ಸಾಮಾನ್ಯ ರಕ್ತದೊತ್ತಡ, ಉತ್ತಮ ರೋಗ ನಿರೋಧಕ ಶಕ್ತಿ, ಉತ್ತಮ ನಿದ್ರೆ, ಹೆಚ್ಚಿನ ಶಕ್ತಿ, ಬಲವಾದ ಚೈತನ್ಯ. ಓಜಸ್, ತೇಜಸ್ ಮತ್ತು ಪ್ರಾಣದ ಹೆಚ್ಚುವರಿ ಶಾಂತ ಮನಸ್ಸು, ಸ್ಪಷ್ಟ ಗ್ರಹಿಕೆ, ಧೈರ್ಯ, ಸ್ಪಷ್ಟತೆ ಮತ್ತು ಬುದ್ಧಿವಂತಿಕೆ, ಹರ್ಷ ಚಿತ್ತತೆ, ಆಶಾವಾದ ಮತ್ತು ಉತ್ಸಾಹ ನೈಸರ್ಗಿಕ ಮತ್ತು ದೀರ್ಘಾಯುಷ್ಯ
ಅಸಮತೋಲಿತ ಅಗ್ನಿಯ ಪ್ರಮುಖ ಕಾರಣಗಳು, ಚಿಹ್ನೆಗಳು ಮತ್ತು ಪರಿಣಾಮ ಕಳಪೆ ಆಹಾರ, ಅನುಚಿತ ಆಹಾರ ಸಂಯೋಜನೆಗಳು, ಬೆಂಬಲವಿಲ್ಲದ ಜೀವನಶೈಲಿ, ಮಳೆಯ ವಾತಾವರಣ,, ಆತಂಕ, ಕೋಪ, ಗೊಂದಲ, ಆಲಸ್ಯ ಅಥವಾ ಖಿನ್ನತೆಯ ಕಡೆಗೆ ಹೆಚ್ಚಿದ ಪ್ರವೃತ್ತಿ ಇವು ಕಾರಣಗಳಾಗಿವೆ. ಚಿಹ್ನೆಗಳು ಕಡಿಮೆ ಶಕ್ತಿ, ದೌರ್ಬಲ್ಯ ಅಥವಾ ಆಯಾಸ. ನಿಗ್ರಹಿಸಿದ ಅಥವಾ ಅತಿಯಾದ ಹಸಿವು ಅಜೀರ್ಣ: ಗ್ಯಾಸ್, ಉಬ್ಬುವುದು, ಮಲಬದ್ಧತೆ, ವಾಕರಿಕೆ, ಹೈಪರ್ ಅಸಿಡಿಟಿ, ಸಡಿಲವಾದ ಮಲ, ಭಾರವಾದ ಭಾವನೆ, ಊಟದ ನಂತರ ಆಯಾಸ ಅಥವಾ ಮಾನಸಿಕವಾಗಿ ಮಂಜಿನ ಭಾವನೆ.
ಸೈನಸ್‌ಗಳು, ದುಗ್ಧರಸ ಅಥವಾ ಮನಸ್ಸಿನಲ್ಲಿ ದಟ್ಟಣೆಯ ಕಡೆಗೆ ಪ್ರವೃತ್ತಿ. ಪರಿಣಾಮ ಈ ಅಡಚಣೆಗಳು ಅಲ್ಪಾವಧಿಯ ಅಥವಾ ದೀರ್ಘ ಕಾಲಿಕವಾಗಿದ್ದರೂ, ದುರ್ಬಲ ಗೊಂಡ ಜೀರ್ಣ ಕ್ರಿಯೆಯ ಪ್ರಕ್ರಿಯೆಯು ಅನಿವಾರ್ಯವಾಗಿ ತ್ಯಾಜ್ಯಗಳ ಶೇಖರಣೆ, ದೋಷಗಳ (ವಾತ, ಪಿತ್ತ ಮತ್ತು ಕಫ) ಮತ್ತು ಭಾವನೆಗಳ ನಿಶ್ಚಲತೆಗೆ ಕಾರಣವಾಗುತ್ತದೆ. ದುರದೃಷ್ಟವಶಾತ್, ಇವೆಲ್ಲವೂ ನಮ್ಮ ಆರೋಗ್ಯ ಮತ್ತು ಯೋಗ ಕ್ಷೇಮವನ್ನು ಸಂಪೂರ್ಣವಾಗಿ ಅಡ್ಡಿ ಪಡಿಸುವ ಸಾಮರ್ಥ್ಯವನ್ನು ಹೊಂದಿರುವ ವಿಷಕಾರಿ ಶೇಷವಾದ ಅಮರಸ ರಚನೆಗೆ ಕಾರಣವಾಗುವ ಅಂಶಗಳಾಗಿವೆ. ಅಗ್ನಿ ಮಾಂದ್ಯ, ಅಜೀರ್ಣ, ಮಲಬದ್ದತೆ ಇನ್ನು ಹಲವಾರು ರೋಗಗಳು ಉಂಟಾಗುತ್ತವೆ.
ಕೊನೆಯದಾಗಿಹೇಳುವುದಾದರೆಸರಿಯಾದಜೀರ್ಣಕ್ರಿಯೆಗೆ ಜಾಠರಾಗ್ನಿಯ ಅತ್ಯಗತ್ಯ ಮಾತ್ರವಲ್ಲ, ಒಟ್ಟಾರೆ ಆರೋಗ್ಯದ ನಿರ್ವಹಣೆಯಲ್ಲಿ ಇದು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ನಮ್ಮ ಜೀರ್ಣಕಾರಿ ಮತ್ತು ವಿಸರ್ಜನಾ ಕಾರ್ಯಗಳಿಂದ ಹಿಡಿದು ನಮ್ಮ ಮಾನಸಿಕ ಸಾಮರ್ಥ್ಯ, ಭಾವನಾತ್ಮಕ ಆರೋಗ್ಯ ಮತ್ತು ಜೀವನದ ಉತ್ಸಾಹದವರೆಗೆ ಎಲ್ಲವನ್ನೂ ಪರಿಣಾಮ ಬೀರುತ್ತದೆ.



**ಡಾ. ನವೀನ್. ಬಿ. ಸಜ್ಜನ್**
**ಪ್ರೊಫೆಸರ್ ಮತ್ತು ಶಸ್ತ್ರ ಚಿಕಿತ್ಸಾ ತಜ್ಞರು ಚಿತ್ರದುರ್ಗ.**

## ಲಿಂಗಸಗೂರುನಲ್ಲಿ ಮೊಹರಂ ಹಬ್ಬದ ಪ್ರಯುಕ್ತ ನಡೆದ ಶಾಂತಿ ಸಭೆ



**ಲಿಂಗಸಗೂರು :** ಮುಂಬರುವ ಮೊಹರಂ ಹಬ್ಬದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಲಿಂಗಸೂರಿನ ಸಿ ಪಿ ಐ ಪುಂಡಲಿಕ್ ಅವರ ಅಧ್ಯಕ್ಷತೆಯಲ್ಲಿ ಸರ್ವಧರ್ಮ ಶಾಂತಿ ಸಭೆ ಲಿಂಗಸೂರ್ ಪೊಲೀಸ್ ಠಾಣೆಯಲ್ಲಿ ಜರುಗಿತು
ಸಭೆಯಲ್ಲಿ ಊರಿನ ಎಲ್ಲಾ ಸಮುದಾಯದ ಹಿರಿಯರು ಭಾಗವಹಿಸಿ ಮುಂಬರುವ ಭಾವೈಕ್ಯತೆಯ ಸಂ-ಕೇತ ಮೊಹರಂ ಹಬ್ಬವನ್ನು ಸರ್ವ ಧರ್ಮಗಳ ಸಮುದಾಯದ ದವರು ಶಾಂತಿಯುತವಾಗಿ ನಡೆಸಲು ಪೊಲೀಸ್ ಇಲಾಖೆಗೆ ಸಹಕರಿಸುವುದಾಗಿ ತಿಳಿಸಿದರು ಈ ಸಂದರ್ಭದಲ್ಲಿ ತಂಜುಮೀನ್ ಮುಸ್ಲಿಂಮಿನ್ ಮುಖಂಡರು ಅನ್ಸರ್ ಸರ್ ಸತ್ತಾರ ಸಾಬ್ ಬಾಬಾಖಾಜಿ ಅಮೀನ್ ಸಾಬ್ ರಂಜೂಸಾಬ ರೋಷನ್ ಸಾಹೇಬ್ ಬಾಬಾ ಜಾನಿ ರಹಿಮ್ ಭೈ ಕಡಕಲ್ ಸಮಿಉಲ್ಲಾಖುರೇಶಿ ಇಸ್ಮಾಯಿಲ್ ಡೇರೆವಾಲೆ ಭಾಗವಹಿಸಿದ್ದರು.

# ಹೆಚ್ಚುತ್ತಿರುವ ತಾಪಮಾನವನ್ನು ತಗ್ಗಿಸಲು ಗಿಡ ಮರಗಳನ್ನು ಬೆಳೆಸಿರಿ: ಶಾಸಕ ಲಕ್ಷ್ಮಣ ಸವದಿ



**ಅಥಣಿ :** ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯವಾಗಿದೆ. ಗಿಡ ಮರಗಳನ್ನು ಹಚ್ಚುವುದು ಕೇವಲ ಪರಿಸರ ದಿನಾಚರಣೆಗೆ ಸೀಮಿತವಾಗಬಾರದು. ಗಿಡಮರಗಳನ್ನು ನೆಟ್ಟು ಪೊ?ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಪರಿಸರವನ್ನು ಬೆಳೆಸುವುದರಿಂದ ಸಕಾಲಕ್ಕೆ ಸಮೃದ್ಧವಾದ ಮಳೆ ಬರುತ್ತದೆ ಮತ್ತು ಹೆಚ್ಚುತ್ತಿರುವ ತಾಪಮಾನವನ್ನು ತಗ್ಗಿಸಲು ಸಹಕಾರಿಯಾಗುತ್ತದೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರುಇಲ್ಲಿನಆರ್.ಎಚ್‌ಕುಲಕರ್ಣಿಸಭಾಂಗಣದಲ್ಲಿ ಅಥಣಿ ಮತ್ತು ಕಾಗವಾಡ ತಾಲೂಕು ಸಹಕಾರಿ ಸಂಘಗಳ ಹಾಗೂ ವಿವಿಧ ಉದ್ದೇಶಗಳ ಗ್ರಾಮೀಣ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಬ್ಯಾಂಕುಗಳ ಒಕ್ಕೂಟ ಇವರ ಸಂಯುಕ್ತ ಆಶ್ರಯದಲ್ಲಿ ಗ್ರಾಮ ಗ್ರಾಮಗಳಲ್ಲಿ ಸಹಕಾರ ಸಂಘಗಳ ಮುಖಾಂತರ 5000 ಸಸಿಗಳ ವಿತರಣೆ ಹಾಗೂ ಪರಿಸರ ಸಂರಕ್ಷಣಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರತಿ ವರ್ಷ ಅರಣ್ಯ ಇಲಾಖೆಯಿಂದ ಸಾವಿರಾರು ಗಿಡಗಳನ್ನ ನೆಡಲಾಗುತ್ತದೆ. ಆ ಗಿಡಗಳು ಬೆಳೆದಿದ್ದರೆ ಊರಿಗೊಂದು ವನ ನಿರ್ಮಾಣವಾಗುತ್ತಿತ್ತು, ಅವರು ನೆಡುವ ಗಿಡಗಳನ್ನ ಪ್ರತಿಯೊಬ್ಬ ಸಾರ್ವಜನಿಕರು ಸಂರಕ್ಷಣೆ ಮಾಡಬೇಕು. ಆದರೆ ಸಾರ್ವಜನಿಕರು ಅವುಗಳನ್ನ ಸರಿಯಾಗಿ ಪೊ?ಷಣೆ ಮಾಡದೇ ಇರುವುದರಿಂದ ಹಚ್ಚಿರುವ ಗಿಡಗಳು ಒಣಗಿ ಹೋಗುತ್ತಿವೆ. ಪರಿಸರ ದಿನಾಚರಣೆ ಕೇವಲ ಗಿಡ ನೆಡುವುದಕ್ಕೆ ಸೀಮಿತವಾಗಿದೆ. ಗಿಡಗಳನ್ನು ನೆಟ್ಟು ಪೋಷಿಸುವಂತಹ ಸಂಸ್ಥೆಗಳಿಗೆ ಸಸಿಗಳನ್ನ ವಿತರಿಸಬೇಕು ಎಂದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಬೆಳಗಾವಿಯ ಸಹಕಾರಿ ಸಂಘಗಳ ಸಂಯುಕ್ತ ನಿಬಂಧಕರಾದ ಡಾ. ಸುರೇಶ್ ಗೌಡ ಮಾತನಾಡಿ ವಿಜ್ಞಾನ ತಂತ್ರಜ್ಞಾನ ಬೆಳೆದಂತೆ ಮಾನವ ತನ್ನ ಸ್ವಾರ್ಥಕ್ಕಾಗಿ ಗಿಡಮರಗಳನ್ನು ಕಡಿದು ಪರಿಸರವನ್ನು ನಾಶ ಮಾಡಿದ್ದಾನೆ. ತಂತ್ರಜ್ಞಾನದ ಅನೇಕ ದುಷ್ಪರಿಣಾಮಗಳಿಂದ ಪರಿಸರದ ಮೇಲೆ ಪರಿಣಾಮವಾಗುತ್ತಿದೆ. ಗಿಡಮರಗಳನ್ನು ಹೆಚ್ಚಿಗೆ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ. ಸಹಕಾರಿ ಸಂಘಗಳ

> ಅಥಣಿ ಮತ್ತು ಕಾಗವಾಡ ತಾಲೂಕುಗಳಲ್ಲಿ ಸಹಕಾರಿ ಸಂಘಗಳ ಒಕ್ಕೂಟದಿಂದ ವಿನೂತನ ಪ್ರಯೋಗ ಮಾಡಲಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಪ್ರತಿ ಗ್ರಾಮದಲ್ಲಿ ಎರಡ–ರಿಂದ ನಾಲ್ಕು ಸಹಕಾರಿ ಸಂಘಗಳು ಇರುತ್ತವೆ. ಪ್ರತಿ ಸಂಘದ ಸದಸ್ಯರು ಮತ್ತು ಸಿಬ್ಬಂದಿ ಕನಿಷ್ಠ 10 ರಿಂದ 15 ಗಿಡಗಳನ್ನ ದತ್ತು ಪಡೆದುಕೊಂಡು ತಮ್ಮ ಸಂಘದ ಆವರಣ, ಶಾಲೆ, ದೇವಸ್ಥಾನ, ರಸ್ತೆಗೆ ಬದಿಗೆ ಹೀಗೆ ಅನೇಕ ಸ್ಥಳಗಳಲ್ಲಿ ಗಿಡಗಳನ್ನು ನೆಟ್ಟು, ಅವುಗಳಿಗೆ ಸಕಾಲಕ್ಕೆ ನೀರುಣಿಸಿ ಪೋಷಿಸುವಂತಹ ಕಾರ್ಯವನ್ನು ಸಹಕಾರಿ ಸಂಘದ ಸದಸ್ಯರು ಕೈಗೊಳ್ಳಬೇಕು.
>
> । ಲಕ್ಷ್ಮಣ ಸವದಿ, **ಶಾಸಕರು**

ಮೂಲಕ ಪರಿಸರ ಸಂರಕ್ಷಣಾ ಅಭಿಯಾನವನ್ನು ಪ್ರಾರಂಭಿಸುವ ಮೂಲಕ ಅಥಣಿ ಮತ್ತು ಕಾಗವಾಡ ಎರಡು ತಾಲೂಕುಗಳಲ್ಲಿ 5000 ಸಸಿಗಳನ್ನು ವಿತರಿಸುವ ಕಾರ್ಯಕ್ರಮ ಅನೇಕ ಸಂಘ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು, ಚಿಕ್ಕೋಡಿ ಜಿಲ್ಲಾ ಅಧ್ಯಕ್ಷ ಸಂಗಮೇಶ ಹಚಡದ ಉಪನ್ಯಾಸ ನೀಡುತ್ತಾ ಪರಿಸರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ ಇರುತ್ತದೆ. ಅರಣ್ಯ ಇಲಾಖೆಯವರು ನಮಗೆ ಸಸಿಗಳನ್ನು ವಿತರಿಸುವುದಲ್ಲದೆ, ಅನೇಕ ಸಾರ್ವಜನಿಕ ಸ್ಥಳಗಳಲ್ಲಿ ಗಿಡಮರಗಳನ್ನು ನೆಟ್ಟಿರುತ್ತಾರೆ. ಸಾರ್ವಜನಿಕರು ಅವುಗಳಿಗೆ ನೀರು ಉಣಿಸುವ ಮೂಲಕ ಪರಿಸರ ಬೆಳವಣಿಗೆಗೆ ಸಹಕರಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಚಿಕ್ಕೋಡಿ ಎಆರ್ ಸಿಎಸ್ ಮಲ್ಲಪ್ಪ ರಾವುತನವರ. ತಾಲೂಕ ಸಹಕಾರ ಅಭಿವೃದ್ಧಿ ಅಧಿಕಾರಿ ರಾಘವೇಂದ್ರ ನೂಲಿ, ವಲಯ ಸಾಮಾಜಿಕ ಅರಣ್ಯಾಧಿಕಾರಿ ಉಮೇಶ ಪ್ರಧಾನಿ. ಶ್ರೀನಿವಾಸ ಸಾರವಾಡ, ಶಂಕರ ನಂದೇಶ್ವರ. ಧನಂಜಯ ಪಾಠಣಕರ. ಸೇರಿದಂತೆ ವಿವಿಧ ಸಹಕಾರಿ ಸಂಘದ ಧುರೀಣರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ತಾಲೂಕಿನ ವಿವಿಧ ಸಹಕಾರಿ ಸಂಘ ಸಂಸ್ಥೆಗಳಿಗೆ ಸಸಿಗಳನ್ನ ವಿತರಿಸಲಾಯಿತು.ಮುರುಗೇಶ ಬಾನಿ ಸ್ವಾಗತಿಸಿದರು. ಶಿಕ್ಷಕ ಅಣ್ಣಪ್ಪ ಸವದಿ ನಿರೂಪಿಸಿದರು.. ಬಿ ಎಲ್ ಪೂಜಾರಿ ವಂದಿಸಿದರು.

# ನೇತ್ರದಾನದ ಮೂಲಕ ಇನ್ನೊಬ್ಬರ ಬಾಳಿಗೆ ಬೆಳಕಾಗಿ: ಶಾಸಕ ಲಕ್ಷ್ಮಣ ಸವದಿ



**ಅಥಣಿ :** ತಾಲೂಕಿನ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಅಥಣಿ ಸಾರ್ವಜನಿಕ ಆಸ್ಪತ್ರೆಯ ವೈದ್ಯರ ತಂಡದಿಂದ ಅತ್ಯುತ್ತಮ ಸೇವೆಮತ್ತುಸರ್ಕಾರದಆರೋಗ್ಯಸೇವೆಗಳು ದೊರಕುತ್ತಿರುವುದು ನನಗೆ ಸಂತಸ ತಂದಿದೆ. ರಾಜ್ಯದ ಅತ್ಯುತ್ತಮ 10 ಸರ್ಕಾರಿ ಆಸ್ಪತ್ರೆಗಳ ಪಟ್ಟಿಯಲ್ಲಿ ಅಥಣಿ ಸಾರ್ವಜನಿಕ ಆಸ್ಪತ್ರೆ ಇರುವುದು ಈ ಕ್ಷೇತ್ರದ ಶಾಸಕನಾಗಿ ನನಗೆ ಹೆಮ್ಮೆ ಎನಿಸುತ್ತದೆ ಎಂದು ಶಾಸಕ ಲಕ್ಷ್ಮಣ ಸವದಿ ಸಂತಸ ವ್ಯಕ್ತಪಡಿಸಿದರು.

ಅವರು ಶನಿವಾರ ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜನಹಿತ ಐಕೇರ ಸೆಂಟರ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡುತ್ತಿದ್ದರು. ತಾಲೂಕ ವೈದ್ಯಾಧಿಕಾರಿ ಡಾ. ಬಸನಗೌಡ ಕಾಗೆ ಅವರ ನೇತೃತ್ವದಲ್ಲಿ ಎಲ್ಲಾ ವೈದ್ಯರ ತಂಡ ಹಾಗೂ ಅವರ ಸಿಬ್ಬಂದಿಗಳ ಸೇವೆ ಅತ್ಯುತ್ತಮವಾಗಿ ಇರುವುದರಿಂದ ರಾಜ್ಯದಲ್ಲಿ ಉತ್ತಮ ಆಸ್ಪತ್ರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ತಾಲೂಕಿನ ಬಡ ಜನತೆಗೆ ಇದೇ ರೀತಿ ತಮ್ಮ ಸೇವೆ ಮುಂದುವರಿಯಬೇಕು. ನಿಮ್ಮ ಸರ್ಕಾರದ ಸೇವೆ ನಿವೃತ್ತಿಯ ನಂತರವೂ ಕೂಡ ಜನರು ಮೆಚ್ಚುಗೆ ವ್ಯಕ್ತಪಡಿಸುವಂತಹ ಸೇವೆ ಸಲ್ಲಿಸಬೇಕೆಂದು ಕರೆ ನೀಡಿದರು.

ಈ ಹಿಂದೆ ಆರು ತಿಂಗಳಿಗೊಮ್ಮೆ ಎರಡು ಬಾರಿ ನೇತ್ರ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಂಡು ಸು. 950 ಕ್ಕೂ ಅಧಿಕ ಜನರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಆದರೂ ಕೂಡ ಇನ್ನೂ ಮುಂದೆ ಇಲ್ಲಿ ನಿರಂತರ ಶಿಬಿರಗಳನ್ನ ಹಮ್ಮಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಶೀಘ್ರದಲ್ಲಿಯೇ ತಾಯಿ ಮಕ್ಕಳ ಆಸ್ಪತ್ರೆ : ಪಟ್ಟಣದ ಹಳೆಯ ತಹಸೀಲ್ದಾರ್ ಕಾರ್ಯಾಲಯದ ಸ್ಥಳವನ್ನು ಕಂದಾಯ ಇಲಾಖೆಯಿಂದ ಆರೋಗ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ. ಈಗಾಗಲೇ ಆರೋಗ್ಯ ಇಲಾಖೆಯಿಂದ ಆಡಳಿತಾತ್ಮಕ ಮಂಜೂರಾತಿ ಕೂಡ ದೊರಕಿದ್ದು, ಶೀಘ್ರದಲ್ಲಿಯೇ 50 ಹಾಸಿಗೆಯ ಸೌಲಭ್ಯವುಳ್ಳ ತಾಯಿ ಮಕ್ಕಳ ಆಸ್ಪತ್ರೆಯನ್ನು ಸ್ಥಾಪಿಸಲಾಗುವುದು ಎಂದು ಹೇಳಿದರು.

**ಆರೋಗ್ಯದ ಜೊತೆಗೆ ಆಹಾರ ಸಲಹೆ ನೀಡಿ :** ಇತ್ತೀಚಿನ ದಿನಮಾನಗಳಲ್ಲಿ ನಮ್ಮ ಒತ್ತಡದ ಬದುಕಿನಲ್ಲಿ ಬಿಪಿ, ಶುಗರ್ ಮತ್ತು ಕ್ಯಾನ್ಸರ್ ನಂತಹ ಕಾಯಿಲೆಗಳು ಹೆಚ್ಚಾಗಿವೆ. ಆದ್ದ–ರಿಂದ ನಮ್ಮ ವೈದ್ಯರು ಜನರಿಗೆ ಆರೋಗ್ಯದ ಚಿಕಿತ್ಸೆ ನೀಡುವುದರ ಜೊತೆಗೆ ಉತ್ತಮ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳಲು ಸಲಹೆ ನೀಡಬೇಕು. ಅನಾರೋಗ್ಯ ಎದುರಿಸುವ ಜನರು ತಮ್ಮ ಆಹಾರ ಪದ್ಧತಿಯನ್ನು ಬದಲಿಸಿಕೊಳ್ಳಬೇಕು. ಆರೋಗ್ಯವಂತ ಬದುಕಿಗೆ ಉತ್ತಮವಾದ ಆಹಾರ, ಅಡುಗೆ ಎಣ್ಣೆಯನ್ನು ಬಳಕೆ ಮಾಡುವುದು ಅಗತ್ಯವಾಗಿದೆ. ಇಂದಿನ ನಮ್ಮ ಕೃಷಿ ಪದ್ಧತಿಯಲ್ಲಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆ ಅಧಿಕವಾಗಿರುವುದರಿಂದ ರೋಗಗಳ ಭಾದೆ ನಮ್ಮನ್ನ ಅಧಿಕವಾಗಿ ಕಾಡುತ್ತಿವೆ. ನಮ್ಮ ರೈತರು ಕೂಡ ಜಾಗೃತರಾಗಿ ಸಾವಯುವ ಕೃಷಿ ಪದ್ಧತಿಯನ್ನು ರೂಡಿಸಿಕೊಳ್ಳಬೇಕು. ಸಾರ್ವಜನಿಕರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿಕೊಳ್ಳಬೇಕೆಂದು ಕರೆ ನೀಡಿ–ದರು.

**ನೇತ್ರದಾನ ಶ್ರೇಷ್ಠವಾದ ದಾನ :** ನೇತ್ರದಾನವೂ ಒಂದು ಶ್ರೇಷ್ಠವಾದ ದಾನವಾಗಿದೆ ನೇತ್ರದಾನ ಮಾಡುವ ಮೂಲಕ ವ್ಯಕ್ತಿಯೊಬ್ಬನ ಬಾಳಿಗೆ ಬೆಳಕಾಗಲು ಸಾಧ್ಯ ತಮ್ಮ ಮರಣಾನಂತರ ಮತ್ತೊಬ್ಬರಿಗೆ ಬೆಳಕಾಗುವ ತಮ್ಮ ತಮ್ಮ ಕಣ್ಣುಗಳನ್ನು ದಾನ ಮಾಡಿ ಈ ನಿಟ್ಟಿನಲ್ಲಿ ನಾನು 16 ವರ್ಷಗಳ ಹಿಂದೆಯೇ ನನ್ನ ಕಣ್ಣುಗಳನ್ನು ದಾನ ಮಾಡಿರುವೆ. ತಾವು ಕೂಡಾ ನಿಟ್ಟಿನಲ್ಲಿ ನೇತ್ರದಾನದ ಮಹತ್ವದ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾದ ಅಗತ್ಯವಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಚಿಕ್ಕೋಡಿ ಡಿಎ ಡಾ.ಶರಣಪ್ಪ ಗಡೇದ, ಚಿಕ್ಕೋಡಿ ಉಪ ವಿಭಾಗಾಧಿಕಾರಿ ಸುಭಾಷ್ ಸಂಪಗಾವಿ ಮಾತನಾಡಿದರು.

ಈವೇಳೆತಹಶೀಲ್ದಾರವಾಣಿ.ಯು,ರಾಜೇಶ್ ಬುರ್ಲಿ. ಶಿವಾನಂದ ಕಲ್ಲಾಪುರ. ವೀರಣ್ಣಾ ವಾಲಿ, ಪುರಸಭಾ ಮುಖ್ಯಾಧಿಕಾರಿ ಅಶೋಕ ಗುಡಿಮನಿ, ರಾಮಗೊಂಡ ಪಾಟೀಲ, ಸಿಪಿಐ ರವೀಂದ್ರ ನಾಯ್ಕೋಡಿ, ಪಿಎ ಶಿವಾನಂದ ಕಾರಜೋಳ, ಡಾ.ಕೃಷ್ಣಮೋಹನ ಜಿಂಕಾ. ಪುರಸಭಾ ಸದಸ್ಯರಾದ ರಾಜಶೇಖರ ಗುಡೋಡಗಿ ಸಂತೋಷ ಸಾವಡಕರ. ಮುಖಂಡರಾದ ರಾಮನಗೌಡ ಪಾಟೀಲ (ಶಿವನೂರ). ವಿನಾಯಕ ಬಾಗಡಿ. ಸೇರಿದಂತೆ ಸಾರ್ವಜನಿಕರು ಪಾಲ್ಗೊಂಡಿದ್ದರು.

ತಾಲೂಕಾ ವೈದ್ಯಾಧಿಕಾರಿ ಡಾ.ಬಸವರಾಜ ಕಾಗೆ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು, ವಿಶ್ವನಾಥ ಮಾಳಿ ನಿರೂಪಿಸಿದರು. ಆರೋಗ್ಯ ಶಿಕ್ಷಣ ಅಧಿಕಾರಿ ಎ.ಬಿ ಗುಳಿಧರ ವಂದಿಸಿದರು.

> 100 ಹಾಸಿಗೆಯ ಸೌಲಭ್ಯವುಳ್ಳ ಅಥಣಿ ಸಾರ್ವಜನಿಕ ಆಸ್ಪತ್ರೆಯನ್ನು 200 ಹಾಸಿಗೆ ಸೌಲಭ್ಯವುಳ್ಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದು. ಆಸ್ಪತ್ರೆಯಲ್ಲಿ ದಿನ ನಿತ್ಯ ನೇತ್ರ ಚಿಕಿತ್ಸಾ ಸೌಲಭ್ಯಕ್ಕಾಗಿ ಅವಶ್ಯಕವಾಗಿ ಬೇಕಾಗುವ ವೈದ್ಯಕೀಯ ಸಾಮಗ್ರಿಗಳ ಖರೀದಿಗೆ ಬೇಕಾಗುವ 16 ಲಕ್ಷ ರೂ.ಗಳನ್ನು ನಾನು ವ್ಯಯಕ್ತಿಕವಾಗಿ ಕೊಟ್ಟಿದ್ದು, ಇನ್ನು ಸ್ಥಳೀಯರು ನಿತ್ಯವೂ ಶಸ್ತ್ರ ಚಿಕಿತ್ಸೆ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬೇಕು.
>
> । ಲಕ್ಷ್ಮಣ ಸವದಿ
> **ಮಾಜಿ ಡಿಸಿಎಂ ಹಾಗೂ ಶಾಸಕರು**

# ಬದುಕಿನಲ್ಲಿ ಉತ್ತಮ ಗುಣಗಳನ್ನು ಬೆಳೆಸಿಕೊಂಡು ಸಾಗಿ



**ಬೈಲಹೊಂಗಲ :** ಬದುಕಿನಲ್ಲಿ ಉತ್ತಮ ಗುಣಗಳನ್ನು ಅಳವಡಿಸಿಕೊಂಡು ಪರೋಪಕಾರಿಯಾದಾಗ ಮಾತ್ರ ಮಾನವನ ಜೀವನ ಸಾರ್ಥಕವಾಗುತ್ತದೆ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗಿಣಿ ಬಿ.ಕೆ.ಪ್ರಭಾ ಮಾತೆಯವರು ಹೇಳಿದರು.

ಅವರು ಪಟ್ಟಣದ ಇಂಚಲ ರಸ್ತೆಯಲ್ಲಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶಾಖಾ ಮಂದಿರದಲ್ಲಿ ಮಾತೇಶ್ವರಿ ಜಗದಂಭಾ ಸರಸ್ವತಿ ಮಮ್ಮಾ ಅವರ ದಿವ್ಯ ಸ್ಮೃತಿ ದಿನಾಚಾರಣೆ ಅಂಗವಾಗಿ ಆಯೋಜಿಸಿದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಿತ್ಯ ಪರಮಾತ್ಮನ ಪೂಜೆ, ಪ್ರಾರ್ಥನೆ ಮಾಡಿ ಉತ್ತಮ ಜ್ಞಾನ ಪಡೆದರೆ ಮನಸ್ಸು ಶಾಂತವಾಗಲಿದ್ದು ಸಾಧಕರ ಕ್ರಮ ಅನುಸರಿಸಿ ಸಾಧನೆಯ ಪಥದತ್ತ ಪ್ರತಿಯೊಬ್ಬರು ಸಾಗಬೇಕೆಂದರು.

ಬಿ.ಕೆ.ಬಸವರಾಜ ತಿಗಡಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಹಲವಾರು ವರ್ಷಗಳಿಂದ ಇಲ್ಲಿನ ಬ್ರಹ್ಮಕುಮಾರಿ ವಿಶ್ವವಿದ್ಯಾಲಯದ ಓಂ ಶಾಂತಿ ಕೇಂದ್ರವು ಈ ಭಾಗದ ಜನರಲ್ಲಿ ಅಧ್ಯಾತ್ಮದ ವಿಚಾರಗಳನ್ನು ಬಿತ್ತಿ ಸುಜ್ಞಾನರನ್ನಾಗಿ ಮಾಡುತ್ತಿದೆ ಎಂದರು.

ಗಣ್ಯರಾದ ಬಿ.ಬಿ.ಗಣಾಚಾರಿ, ಮಡಿವಾಳಪ್ಪ ಹೋಟಿ, ವೀರುಪಾಕ್ಷಪ್ಪ ಕೋರಿಮಠ, ವಿಠ್ಠಲ ದಾಸೋಗ, ದಯಾನಂದ ಹೋಟಿ, ವಾಯ್.ಎಂ.ದಳವಾಯಿ, ಡಾ.ಜೆ.ಬಿ.ಪಾಟೀಲ, ಪ್ರಕಾಶ ಬೆಟಗೇರಿ, ಎಸ್.ಎಂ.ಪಟ್ಟಿಹಾಳ, ಐ.ಎಸ್.ಬಳಿಗಾರ, ಬಿ.ಎಫ್.ತಳವಾರ, ಎಸ್.ಎಚ್. ಹಾಲನ್ನವರ, ಬಸಪ್ಪ ಮತ್ತಿಕೊಪ್ಪ, ನಿವೃತ್ತ ಶಿಕ್ಷಕ ಬಸವರಾಜ ಕರ್ಕಿ, ಮಹಾಂತೇಶ ಕಾಜಗಾರ, ಗಿರೀಜಾ ದೇಶನೂರ, ಸುವರ್ಣ ಅಳಗುಂಡಿ, ಗೌರಾಂಬಿಕೆ ಬೆಟಗೇರಿ ಮುಂತಾದವರು ಉಪಸ್ಥಿತರಿದ್ದರು.

ಬಿ.ಕೆ.ಬಸವರಾಜಬಬ್ಬನಹಳ್ಳಿಸ್ವಾಗತಿಸಿದರು. ತಾಲೂಕಾ ಕಜಾಪ ವಕ್ತಾರ ಮಹಾಂತೇಶ ರಾಜಗೋಳಿ ನಿರೂಪಿಸಿದರು. ಸಿದ್ದಲಿಂಗಪ್ಪ ಸಿದ್ದಯ್ಯನವರ ವಂದಿಸಿದರು.

# ಪತ್ರಕರ್ತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ




**ಹಾವೇರಿ :** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೆಂಗಳೂರು ಮತ್ತು ಹಾವೇರಿ ಜಿಲ್ಲಾ ಕಾರ್ಯನಿರತ ಸಂಘ (ರಿ) ಹಾವೇರಿ ಇವರ ಸಹಯೋಗದೊಂದಿಗೆ ಭಾನುವಾರ ಪತ್ರಕರ್ತ ಮಕ್ಕಳಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇಕಡಾ 90% ಕ್ಕಿಂತ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಆಯೋಜಿಸಿದರು.ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭ ನಗರದ ಶ್ರೀ ಗುರುಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ಜರಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಜವಳಿ, ಕೃಷಿ ಮತ್ತು ಸಕ್ಕರೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಶಿವಾನಂದ ಪಾಟೀಲ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ, ಸಂಸದರಾದ ಬಸವರಾಜ ಬೊಮ್ಮಾಯಿ, ಶಾಸಕರಾದ ರುದ್ರಪ್ಪ ಲಮಾಣಿ, ಸಲ್ಮಿಂಅಹ್ಮದ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರ ಅನೇಕರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬಾಗಲಕೋಟೆಯ ಪರಿಶ್ರಮ ವಾರ್ತೆ ದಿನ ಪತ್ರಿಕೆ ಸಂಪಾದಕರಾದ ವೀರೇಶ ಹಿರೇಮಠ ಅವರ ಸುಪುತ್ರ ಕುಮಾರ ಶಿವು ಹಿರೇಮಠ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 600 ಕ್ಕೆ 568 ಅಂಕ ಪಡೆದು ಶೇಕಡಾ 94.66 ಪಡೆದಿದ್ದನು, ಹಿರಿಯ ಪತ್ರಕರ್ತರಾದ ಆನಂದ ಧಲಬಂಜನ ಅವರ ಪುತ್ರಿ ಕುಮಾರಿ ಪ್ರೀತಿ ಧಲಬಂಜನ ಶೇ. 95.66, ಮುಧೋಳದ ಹಿರಿಯ ಪತ್ರಕರ್ತರಾದ ಮಲ್ಲಿಕಾರ್ಜುನ ಗೋವಿಂದಪುರಮಠ ಅವರ ಕುಮಾರ ಪುತ್ರ ತೇಜಸ್ಸ ಗೋವಿಂದಪೂರಮಠ ಶೇ. 96.50, ಮಹಾಲಿಂಗಪೂರದ ಹಿರಿಯ ಪತ್ರಕರ್ತರಾದ ಮಹೇಶ ಮನ್ನಯ್ಯನಮಠ ಕುಮಾರ ಪುತ್ರ ವೆಂಕಟೇಶ ಮನ್ನಯ್ಯನಮಠ ಶೇ. 94.83, ಬೀಳಗಿಯ ಪತ್ರಕರ್ತರಾದ ಗುರುರಾಜ ಅರಕೇರಿ ಅವರ ಪುತ್ರ ಸಿದ್ದಾರ್ಥ ಅರಕೇರಿ ಶೇ.89.66 ಹಾಗೂ ಎಸ್.ಎಸ್.ಎಲ್.ಸಿಯಲ್ಲಿ ಪುತ್ರಿ ಕುಮಾರಿ ಸ್ನೇಹಾ ಅರಕೇರಿ ಶೇ. 89.92 ಅವರಿಗೆ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

# ವೈದ್ಯರ ಕಾಯಕ ಸ್ಫೂರ್ತಿದಾಯಕ: ಡಾ. ಗಿರಿಧರ್ ಕಜೆ




**ಬಾಗಲಕೋಟೆ :** ಕೌಟುಂಬಿಕ ಸಂಬಂಧಗಳ ಹೊರತಾಗಿಯೂ ರೋಗಿಗಳ ಜೊತೆ ಪ್ರೀತಿ ಮತ್ತು ಕಾಳಜಿಯಿಂದ ಕಾಯಕ ನಿಷ್ಠೆ ಪ್ರದರ್ಶಿಸುವವೈದ್ಯರಸೇವೆಸ್ಫೂರ್ತಿದಾಯಕ ಎಂದು ಡಾ. ಗಿರಿಧರ್ ಕಜೆ ತಿಳಿಸಿದರು.

ನಗರದ ಎಂ ಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ವೈದ್ಯ ದಿನಾಚರಣೆಯಲ್ಲಿ ಮುಖ್ಯ ಭಾಷಣಕಾರರಾಗಿಮಾತನಾಡಿದಕರ್ನಾಟಕ ಆಯುರ್ವೇದಿಕ್ ಮತ್ತು ಯುನಾನಿ ವೈದ್ಯ ಮಂಡಳಿಯ ಸದಸ್ಯರಾಗಿರುವ ಡಾ. ಗಿರಿಧರ್ ಕಜೆ ಮಾತನಾಡುತ್ತಾ ವಿಶ್ವವನ್ನು ಸುರಕ್ಷಿತವಾಗಿಡುವಲ್ಲಿ ಪ್ರತಿಯೊಬ್ಬ ವೈದ್ಯರ ಪ್ರತಿನಿತ್ಯದ ಸೇವೆ ನಮ್ಮೆಲ್ಲರಿಗೂ ಆದರ್ಶದಾಯಕ. ಅಷ್ಟೇ ಅಲ್ಲದೆ ಜನಸಾಮಾನ್ಯರ ಕಾಯಿಲೆಗಳಿಗೆ ತಮ್ಮ ಸಂಪೂರ್ಣ ಸಮಯ ನೀಡುವ ವೈದ್ಯರನ್ನು ನಾವೆಲ್ಲರೂ ಗೌರವಿಸೋಣ ಎಂದರು.

ಬೆಂಗಳೂರಿನ ಪ್ರತಿಷ್ಠಿತ ನಾರಾಯಣ್ ಹೃದಯಾಲಯದಲ್ಲಿ ವೈದ್ಯರಾಗಿರುವ ಡಾ. ಧಡೆದ ಸಂಜಯ್ ಬಸವರಾಜ್ ಅವರು ಕಾರ್ಯಕ್ರಮದ ಗೌರವ ಅತಿಥಿಯಾಗಿ ಮಾತನಾಡಿ ರೋಗಿಗಳ ಆರೋಗ್ಯ ರಕ್ಷಣೆಗಾಗಿ ಹಗಲಿರುಳು ಶ್ರಮಿಸುವ ವೈದ್ಯರನ್ನು ಗುರುತಿಸಿ ಈ ಸಂಸ್ಥೆಯು ವೈದ್ಯರತ್ನ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡುವುದು ಖುಷಿಯ ಸಂಗತಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಟಿಐಈಐ ನ ಅಧ್ಯಕ್ಷರಾಗಿರುವ ಮಾಧುರಿ ಮುಧೋಳ್ ಮಾತನಾಡುತ್ತಾ ಪ್ರತಿ ವರ್ಷ ನಮ್ಮ ಸಂಸ್ಥೆಯು ಶ್ರೇಷ್ಠ ವೈದ್ಯರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಮತ್ತಷ್ಟು ವೈದ್ಯರಿಗೆ ಪ್ರೇರಣೆಯಾಗಲಿ ಎಂದರು.

ಬೆಂಗಳೂರಿನ ಪ್ರಸಿದ್ಧ ನಾರಾಯಣ ಹೃದಯಾಲಯದಲ್ಲಿ ಸುಮಾರು 30ಕ್ಕೂ ಹೆಚ್ಚು ವರ್ಷಗಳ ಕಾಲ ಶ್ರೇಷ್ಠ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಡಾ. ಧಡೆದ ಸಂಜಯ್ ಬಸವರಾಜ್ ಹಾಗೂ ಆಯುರ್ವೇದಿಕ್ ಕ್ಷೇತ್ರದಲ್ಲಿ ಸುಮಾರು 23 ವರ್ಷಗಳ ಕಾಲ ಸೇವೆ ಸಲ್ಲಿಸಿ ಕರ್ನಾಟಕ ರಾಜ್ಯ ಪ್ರಶಸ್ತಿಯನ್ನು ಪಡೆದ ಡಾ ಗಿರಿಧರ್ ಕಜೆ ಅವರಿಗೆ ಸಂಸ್ಥೆ ವತಿಯಿಂದ ವೈದ್ಯರತ್ನ – 2024 ಪ್ರಶಸ್ತಿಯನ್ನು ನೀಡಲಾಯಿತು.

ಈ ಸಂದರ್ಭ ಕಾಲೇಜಿನ ಡೀನ್ / ಆಡಳಿತಾಧಿಕಾರಿಯಾದ ಡಾ. ಶಿವಕುಮಾರ್ ಗಂಗಾಲ, ಪ್ರಾಂಶುಪಾಲರಾದ ಡಾ. ಪ್ರಹ್ಲಾದ್ ಗಂಗಾವತಿ, ಹಿರಿಯ ಉಪನ್ಯಾಸಕರಾದ ಡಾ. ವಿಜಯಕುಮಾರ ಚವಡಿ, ಡಾ. ಈಶ್ವರ ಪಾಟೀಲ್, ಡಾ. ವೆಂಕಟೇಶ ಗೌಡರ, ಡಾ. ದೀಪಾ ಗಂಗಾಲ, ಡಾ. ರಜನಿ ದಡೇದ್, ಡಾ.ವೀಣಾ ಕುಲಕರ್ಣಿ, ಡಾ. ಅತಿರಾ, ಡಾ. ಅಂಜನಾ, ಡಾ.ಶಶಿಕಲಾ, ಡಾ.ನೇಹಾ, ಡಾ. ಸುಪ್ರಿಯಾ ಬೋಸ್ಲೆ, ಡಾ. ಪಾರ್ವತಿ ಸೇರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು.

# ಹಾವೇರಿಯಲ್ಲಿ ಸಾಹಿತ್ಯಗೆ ಪ್ರತಿಭಾ ಪುರಸ್ಕಾರ ಪ್ರದಾನ




**ಕೊಪ್ಪಳ :** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೆಂಗಳೂರು ಮತ್ತು ಜಿಲ್ಲಾ ಘಟಕ, ಹಾವೇರಿ ವತಿಯಿಂದ 2024ನೇ ಸಾಲಿನ ರಾಜ್ಯಮಟ್ಟದ ಪತ್ರಕರ್ತರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಕೊಪ್ಪಳ ನಗರದ ಸಾಹಿತ್ಯ ಎಂ. ಗೊಂಡಬಾಳ ಅವರನ್ನು ಸನ್ಮಾನಿಸಲಾಯಿತು.

ಅದ್ದೂರಿ ಕಾರ್ಯಕ್ರಮದಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್, ವಿಧಾನ ಪರಿಷತ್ ಮುಖ್ಯ ಸಚೇತಕರಾದ ಸಲೀಂ ಅಹ್ಮದ್, ಕರ್ನಾಟಕ ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಕಾನಿಪ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಶೇ. 90ಕ್ಕಿಂತ ಅಧಿಕ ಅಂಕ ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿತ್ತು. ಕ್ರಮವಾಗಿ 2500 ಮತ್ತು 3000 ನಗದು ಪುರಸ್ಕಾರ ನೀಡಲಾಯಿತು.

ಕೊಪ್ಪಳ ಜಿಲ್ಲೆಯಿಂದ ಪತ್ರಕರ್ತ ಮಂಜುನಾಥ ಜಿ. ಗೊಂಡಬಾಳ ಮಗಳು ಸಾಹಿತ್ಯ ಎಂ. ಗೊಂಡಬಾಳ (ಶೇ. 93.92 ಎಸ್.ಎಸ್.ಎಲ್.ಸಿ), ಮುನಿರಾಬಾದಿನ ಪತ್ರಕರ್ತ ನಾರಾಯಣ್ ರಾವ್ ಅವರ ಮಗಳು ಬೃಂಧ ಎಸ್.ಎನ್. (ಶೇ. 90.72 ಎಸ್.ಎಸ್.ಎಲ್.ಸಿ), ಪತ್ರಕರ್ತ ವೀರಣ್ಣ ಕಳ್ಳಿಮನಿ ಅವರ ಮಗ ಸಾಹಿಲ್ ಕುಮಾರ (ಪಿಯುಸಿ ಶೇ. 95) ಹಾಗೂ ಕುಕನೂರಿನ ಪತ್ರಕರ್ತ ಬಸವರಾಜ ಕೊಡ್ಲಿರವರ ಮಗಳು ಕಾವ್ಯ (ಪಿಯುಸಿ ಶೇ. 95) ರವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕಾನಿಪ ರಾಜ್ಯ ಕಾರ್ಯಕಾರಣಿ ವಿಶೇಷ ಆಹ್ವಾನಿತ ಸದಸ್ಯರಾದ ಎಚ್.ಎಸ್ ಹರೀಶ್ ಹಾಗೂ ಜಿಲ್ಲಾಧ್ಯಕ್ಷ ಬಸವರಾಜ ಗುಡ್ಲಾನೂರ, ಮಂಜುನಾಥ ಗೊಂಡಬಾಳ, ಈರಣ್ಣ ಕಳ್ಳಿಮನಿ, ಬಸವರಾಜ ಕೊಡ್ಲಿ ಭಾಗವಹಿಸಿದ್ದರು.

# ಕೊಪ್ಪಳ: ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕೆ ಅರ್ಜಿ: ಅವಧಿ ವಿಸ್ತರಣೆ

**ಕೊಪ್ಪಳ :** ದದೇಗಲ್‌ನ ಸರಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಿಂದ (ಜಿಟಿಟಿಸಿ) 2024–25ನೇ ಸಾಲಿಗೆ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆ ಅವಧಿಯನ್ನು ವಿಸ್ತರಿಸಲಾಗಿದೆ.

ಜಿಟಿಟಿಸಿ ಕೇಂದ್ರದಲ್ಲಿ 3+1 ವರ್ಷ ಅವಧಿಯ ಡಿಪ್ಲೋಮಾ ಇನ್ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ( ಇ&ಸಿ), ಡಿಪ್ಲೋಮಾ ಇನ್ ಮೆಕಾಟ್ರಾನಿಕ್ಸ್ (ಡಿಎಂಸಿಹೆಚ್) ಹಾಗೂ ಡಿಪ್ಲೋಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್ (ಡಿಟಿ–ಡಿಎಂ) ಕೋರ್ಸುಗಳಿಗೆ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಗದಗ ರೋಡ್, ದದೇಗಲ್ ಇಲ್ಲಿಗೆ ಖುದ್ದಾಗಿ ಬಂದು ಅರ್ಜಿಯನ್ನು ಪಡೆದು, ಭರ್ತಿ ಮಾಡಿ ಜುಲೈ 15 ರೊಳಗಾಗಿ ಸಲ್ಲಿಸಬೇಕು. ಜಿಟಿಟಿಸಿ ಕೇಂದ್ರದಲ್ಲಿ ಕೆಲವೇ ಸೀಟುಗಳು ಮಾತ್ರ ಲಭ್ಯವಿರುವುದರಿಂದ ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಟಿಟಿಸಿ ಕಾರ್ಯಾಲಯಕ್ಕೆ ಅಥವಾ ಮೊ.ಸಂ: 7507094445, 9986088894 ಗೆ ಸಂಪರ್ಕಿಸಬಹುದಾಗಿದೆ ಎಂದು ತರಬೇತಿ ಕೇಂದ್ರದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜುಲೈ 13 ರಂದು ರಾಷ್ಟ್ರೀಯ ಲೋಕ ಅದಾಲತ್

**ಕೊಪ್ಪಳ:** ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದ ಮೇರೆಗೆ ಕೊಪ್ಪಳ ಜಿಲ್ಲೆಯ ಎಲ್ಲ ನ್ಯಾಯಾಲಯಗಳಲ್ಲಿ ಜುಲೈ 13 ರಂದು ರಾಷ್ಟ್ರೀಯ ಲೋಕ್ ಅದಾಲತ್ ಅನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗಾ ನ್ಯಾಯಾಲಯಗಳಲ್ಲಿ ಚಾಲ್ತಿ ಇರುವ ಪ್ರಕರಣಗಳು ಹಾಗೂ ಇನ್ನೂ ನ್ಯಾಯಾಲಯಕ್ಕೆ ದಾಖಲಿಸದೇ ಇರುವ ಪ್ರಕರಣಗಳನ್ನು ವ್ಯಾಜ್ಯಪೂರ್ವ ಪ್ರಕರಣಗಳು ಎಂದು ಪರಿಗಣಿಸಿ, ವಿವಿಧ ಪ್ರಕರಣಗಳಾದ ಮೋಟಾರು ವಾಹನ ಅಪಘಾತ ಪರಿಹಾರದ ಪ್ರಕರಣಗಳು, ಅಸಲು ದಾವೆಗಳು, ಬ್ಯಾಂಕುಗಳಿಗೆ ಸಂಬಂಧಿಸಿದ ಪ್ರಕರಣಗಳು, ಭೂಸ್ವಾಧೀನ ಪ್ರಕರಣಗಳು, ವೈವಾಹಿಕ ಹಾಗೂ ಜೀವನಾಂಶ ಪ್ರಕರಣಗಳು, ಕಾನೂನಿನನ್ವಯ ರಾಜೀ ಆಗಬಹುದಾದ ಕ್ರಿಮಿನಲ್ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ರಾಜೀ ಆಗಬಹುದಾದ ಎಲ್ಲಾ ತರಹದ ಪ್ರಕರಣಗಳನ್ನು ಜುಲೈ 13 (2ನೇ ಶನಿವಾರ) ರಂದು ಆಯಾ ನ್ಯಾಯಾಲಯಗಳಲ್ಲಿ ಇತ್ಯರ್ಥಪಡಿಸಿಕೊಳ್ಳಲು ರಾಷ್ಟ್ರೀಯ ಲೋಕ್ ಅದಾಲತ್‌ನ್ನು ಏರ್ಪಡಿಸಲಾಗಿದೆ. ಕಕ್ಷಿದಾರರು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಪ್ರಧಾನ ಜಿಲ್ಲಾ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಸಿ. ಚಂದ್ರಶೇಖರ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಲಕಾರಿ ರಾಮಪ್ಪ ಒಡೆಯರ್ ಅವರು ಜಂಟಿ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಉತ್ತಮ ಶಿಕ್ಷಣ ನೀಡುವ ಉದ್ದೇಶದಿಂದ ಪೂರ್ವ ಪ್ರಾಥಮಿಕ ಶಾಲೆ



**ನವಲಗುಂದ :** ಸರ್ಕಾರಿ ಶಾಲೆ ಸಬಲಿಕರಣ ಹಾಗೂ ಉತ್ತಮ ಶಿಕ್ಷಣ ನೀಡುವ ಉದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಸರ್ಕಾರ ಶಿಕ್ಷಣ ಮಂತ್ರಾಲಯ ಪಿ,ಎ ಬಿ ಯಲ್ಲಿ ಅನುಮತಿಸಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್ ಬಿ ಮಲ್ಲಾಡ ಹೇಳಿದರು.

ಮಹಬೂಬ ಸರಕಾರಿ ಕಿರಿಯ ಉರ್ದು ಪ್ರಾಥಮಿಕ ಗಂಡು ಮಕ್ಕಳ ಶಾಲೆ ನಂ 3 ರಲ್ಲಿ ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಎಲ್ ಕೆ ಜಿ / ಯು ಕೆ ಜಿ ನರ್ಸರಿ ತರಗತಿ ಉದ್ಘಾಟನೆ ಹಾಗೂ ನರ್ಸರಿ ಶಾಲೆಗೆ ಬಂದಂತಹ ಅನುದಾನದಲ್ಲಿ ಶಿಶು ಸ್ನೇಹಿ ಪೀಠೋಪಕರಣಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಮ್ಮದಶಿರಾಜ ಶಿರಕೋಳ ಮಾತನಾಡಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಬೇಕು ಹಾಗೂ ಸರ್ಕಾರ ಸರ್ಕಾರಿ ಶಾಲೆ ಬೆಳೆಸುವ ಉದ್ದೇಶದಿಂದ ಸರ್ಕಾರಿ ಶಾಲೆಗಳಲ್ಲಿಯೇ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಅನುಮತಿಸಿದ್ದಾರೆ ಎಂದರು.

ಕ್ಲಸ್ಟರಿನ ಸಿ.ಆರ್.ಪಿ.ಗಳಾದ ಗಣೇಶ ಹೋಳೆಯಣ್ಣವರ, ಎಚ್ ಎಂ ಗುರಾಣಿ, ಜಹೀರ್ ಅಬ್ಬಾಸ್ ಮಕಾನದಾರ, ಅಬ್ಬಾಸ್‌ಅಲಿ ದೇವರಿಡು, ರಾಜೇಸಾಬ ಅಣ್ಣಿಗೇರಿ, ಬಾಬಾಜಾನ ಖುದಾವಂದ, ಮಹ್ಮದಜಬ್ಬಾರ ಧಾರವಾಡ, ಶೇಖಹಸನ ಸಿರಗುಪ್ಪಿ, ಮಹ್ಮದಇಸಾಕ ದಾರುಗಾರ, ಮಕ್ತುಮಸಾಬ ಮಿರ್ಜಿ, ಅಲ್ಲಾಬಕ್ಷ ಮಕಾನದಾರ, ಶಿಕ್ಷಕರಾದ ಎಂ.ಎಂ.ಮುಲ್ಲಾ, ಸಿ ಎಚ್ ಜಗಾಪೂರ, ಎಸ ಜಿ ಮಕಾನದಾರ, ಎಸ್ ಎಂ ಕಾಗದಗಾರ, ಫೈರೋಜಾ ದಾರುಗಾರ ಮುಂತಾದವರು ಉಪಸ್ಥಿತರಿದ್ದರು.

# ಲಕ್ಷ್ಮೇಶ್ವರ: ಸದ್ಬೋಧ ಸಮ್ಮಾನ ಸಮ್ಮಿಲನ



**ಲಕ್ಷ್ಮೇಶ್ವರ :** ಪಟ್ಟಣದ ಚನ್ನಮ್ಮನವನದಲ್ಲಿ ಪ್ರತಿಭಾ ಪುರಸ್ಕಾರ ಉಪನ್ಯಾಸ ಸನ್ಮಾನ ಕಾರ್ಯಕ್ರಮ ಸದ್ಬೋದ ಸಮ್ಮಾನ ಸಮ್ಮಿಲನ ಸಮಾರಂಭ ರಾಮಗಿರಿಯ ಬಸಣ್ಣನವರು ಬೆಟಗೇರಿ ಅವರ ಅಭಿಮಾನಿ ಬಳಗದಿಂದ ಜರುಗಿತು.

ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಮುಂಡರಗಿಯ ಸಂತಾನ ಮಠದ ಪರಮಪೂಜ್ಯ ಜಗದ್ಗುರು ನಾಡೋಜ ಡಾ . ಅನ್ನದಾನಿಶ್ವರ ಮಹಾ ಶಿವಯೋಗಿಗಳವರು ಮಾನವನಾಗಿ ಜನ್ಮ ತಾಳಿದ ಮೇಲೆ ಜೀವನದಲ್ಲಿ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜದ ಋಣವನ್ನು ತೀರಿಸಬೇಕು.

ರಾಮಗಿರಿ ಗ್ರಾಮದ ಬಸಣ್ಣ ಬೆಟಗೇರಿ ಅವರು ಜೀವನದುದ್ದಕ್ಕೂ ಸಾತ್ವಿಕ ಜೀವನವನ್ನು ನಡೆಸಿ ಸಾಮಾಜಿಕ ಕಳಕಳಿ ಗ್ರಾಮೀಣ ಅಭಿವೃದ್ಧಿ ಹಿನ್ನೆಲೆಯಲ್ಲಿ ಜೀವನವನ್ನು ಕಳೆದು ತಮ್ಮ ಹುಟ್ಟು ಹಬ್ಬದ ಅಂಗವಾಗಿ ವಿನಾಕಾರ ಣ ಹಣವನ್ನು ಹಾಳು ಮಾಡದೆ ಅದರ ನೆಪದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡುವ ಮೂಲಕ ವಿದ್ಯಾರ್ಥಿಗಳ ಭವಿಷ್ಯಕ್ಕೆ ಪ್ರೇರಣೆ ನೀಡಿರುವದು ಎಲ್ಲರಿಗೂ ಮಾದರಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕರಾದ ಎಂಎ ರೆಡ್ಡೇರವರು ಮಾತನಾಡಿದರು. ವಿಶ್ರಾಂತ ಉಪ ನಿರ್ದೇಶಕರಾದ ಐಬಿ ಬೆನಕೊಪ, ಹಾನಗಲ್ ಕ್ಷೇತ್ರ ಶಿಕ್ಷಣಾಧಿಕಾರಿ ವಿವಿ ಸಾಲಿಮಠ ಮುಂಡರಗಿಯ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್‌ಎಂ ಪಡ್ನೇಶಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕರೆವಾಡಿ ಮಠದ ಮಳೆ ಮಲ್ಲಿಕಾರ್ಜುನ ಶ್ರೀಗಳು, ಎಪಿಎಂಸಿ ಮಾಜಿ ಅಧ್ಯಕ್ಷರಾದ ಬಸಣ್ಣ ಬೆಟಗೇರಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಬಿ. ಎಸ್. ಹರಲಾಪುರ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಈಶ್ವರ್ ಮೆಡ್ಲೇರಿ, ಉಪನ್ಯಾಸಕ ಮಂಜುನಾಥ ಕೊಕ್ಕರಗುಂದಿ, ಉಮೇಶ ನೇಕಾರ, ಸತೀಶ ಬೊಮಲೆ ಸೇರಿದಂತೆ ಅನೇಕರಿದ್ದರು. ಶಿಕ್ಷಕರಾದ ಚಂದ್ರು ನೇಕಾರ, ನಾಗರಾಜ ಶಿಗ್ಲಿ ನಿರ್ವಹಿಸಿದರು. ನಂತರ ಶಿಕ್ಷಕ ರಾಜು ರಜಪೂತ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

# ಮಹರ್ಷಿ ಶ್ರೀಯಜ್ಞವಲ್ಕ್ಯರ ಅನುಯಾಯಿಗಳ ರಾಜ್ಯಸಮ್ಮೇಳನ ಹುಬ್ಬಳ್ಳಿಯಲ್ಲಿ: ಮರಟಗೇರಿ

**ಕಲಬುರಗಿ :** ಮಹರ್ಷಿ ಶ್ರೀಯಜ್ಞವಲ್ಕ್ಯ ಗುರುಗಳ ಬಗ್ಗೆ ಸಂಪೂರ್ಣವಾದ ಜ್ಞಾನ ಹಾಗೂ ಅವರ ಕೊಡುಗೆಗಳನ್ನು ಇಂದಿನ ಯುವ ಪೀಳಿಗೆಗೆ ಮನವರಿಕೆ ಮಾಡಿ ಕೊಡುವ ಉದ್ದೇಶದಿಂದ ನವಂಬರನಲ್ಲಿ ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಶ್ರೀಯಜ್ಞವಲ್ಕ್ಯರ ಅನುಯಾಯಿಗಳ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಯೋಗೀಶ್ವರ ಸೇವಾ ಟ್ರಸ್ಟ್ ಹುಬ್ಬಳ್ಳಿಯ ಪ್ರಮುಖರಾದ ಶ್ರೀ ಸತ್ಯನಾರಾಯಣ ಮರಟಗೇರಿ ಮಾತನಾಡಿದರು.

ಕಲಬುರಗಿ ನಗರದ ಸಂಗಮೇಶ್ವರ ಬಡಾವಣೆಯ ಶ್ರೀ ಸೂರ್ಯನಾರಾಯಣ ದೇವಸ್ಥಾನದ ಶ್ರೀ ಯಾಜ್ಞವಲ್ಕ್ಯ ಭವನದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು ಶ್ರೀಯಜ್ಞವಲ್ಕ್ಯರು ಕೇವಲ ವಿಪ್ರರಿಗೆ ಮಾತ್ರವಲ್ಲದೆ ಇಡೀ ಮಾನವ ಕುಲದ ಕಲ್ಯಾಣಕ್ಕಾಗಿ ವೇದ, ಉಪನಿಷತ್ತುಗಳನ್ನು ಕೊಡುಗೆಗಳನ್ನಾಗಿ ನೀಡಿದ್ದಾರೆ.

ಸೂರ್ಯನಿಂದ ಪಡೆದ ಬ್ರಹ್ಮ ಜ್ಞಾನವನ್ನು ಮನಕುಲದ ಒಳಿತಿಗಾಗಿನೀಡಿದ್ದಾರೆ,ಸಪ್ತಋಷಿಗಳುಕೂಡಬ್ರಹ್ಮಜ್ಞಾನವನ್ನು ಶ್ರೀಯಜ್ಞವಲ್ಕ್ಯರಲ್ಲಿ ಪಡೆದಿದ್ದರು.ಬ್ರಾಹ್ಮಣರೆಲ್ಲರೂ ಶ್ರೀಯಜ್ಞವಲ್ಕ್ಯ ಅನುಯಾಯಿಗಳು ನಮ್ಮೆಲ್ಲರ ಸಂಪ್ರದಾಯಗಳು ಶ್ರೀಯಜ್ಞವಲ್ಕ್ಯರಿಂದಲೇ ಪ್ರಾರಂಭವಾಗುತ್ತವೆ, ಹಳ್ಳಿಯಿಂದ ದಿಲ್ಲಿಯವರೆಗೂ ನಾವು ಶ್ರೀಯಜ್ಞವಲ್ಕ್ಯರ ಜಯಂತಿಯನ್ನು ಆಚರಿಸುತ್ತೇವೆ, ಅವರ ಕೊಡುಗೆಗಳನ್ನು ಸಮಾಜಕ್ಕೆ ತಲುಪಿಸಲು ರಾಜ್ಯಮಟ್ಟದ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದರು.



ಇಂದಿನ ಯುವ ಪೀಳಿಗೆ ಸನಾತನ ಧರ್ಮವನ್ನು ತಿಳಿಯುವುದರಲ್ಲಿ ಉತ್ಸುಕವಾಗಿದೆ ಹಿರಿಯರಾದ ನಾವು ನಮ್ಮ ಧರ್ಮ, ಸಂಸ್ಕಾರಗಳನ್ನು ಸಮ್ಮೇಳನದ ಮೂಲಕ ತಿಳಿಸಿ ಕೊಡುವ ಜವಾಬ್ದಾರಿ ಹಿರಿಯರಾದ ನಮ್ಮ ಮೇಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಯಜ್ಞವಲ್ಕ್ಯ ಸಮಿತಿ ಕಲಬುರಗಿಯ, ಅಧ್ಯಕ್ಷರಾದ ಶ್ರೀಮಲ್ಹಾರಾವ ಕುಲಕರ್ಣಿ ಗಾರಂಪಳ್ಳಿ ಮಾತನಾಡಿ ಕಲಬುರಗಿಯ ವಿಪ್ರರೆಲ್ಲರೂ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಭಕ್ತಿಯಿಂದ ಭಾಗಿಯಾಗುತ್ತೇವೆ, ಧರ್ಮ ಕಾರ್ಯದಲ್ಲಿ ನಾವೆಲ್ಲರೂ ಒಂದಾಗಿ ಶ್ರಮಿಸೋಣ ಎಂದರು.

ಹಿರಿಯರಾದ ಶ್ರೀ ಶಾಮಾಚಾರ್ಯ ಬೈಚಬಾಳ್ ಮಾತನಾಡಿ ಧರ್ಮ ಜಾಗೃತಿಗೊಳಿಸುವ ಹಾಗೂ ಮಹಾಋಷಿಗಳ ಮಹಿಮೆ ಹಾಗೂ ಕೊಡುಗೆಗಳ ಬಗ್ಗೆ ಜಾಗೃತಿ ಮೂಡಿಸುವ ಸಮ್ಮೇಳನ ಆಯೋಜಿಸಿರುವುದು ಆಯೋಜಿಸುತ್ತಿರುವುದು ಸ್ವಾಗತಾರ್ಹ ಎಂದರು.

ಶ್ರೀಯಜ್ಞವಲ್ಕ್ಯ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ರಾಘವೇಂದ್ರ ವಕೀಲ್ ಮಾತನಾಡಿ ಯಜ್ಞದಿಂದ ಜನಿಸಿದ ಶ್ರೀಯಜ್ಞವಲ್ಕ್ಯರು ಸಾಕ್ಷಾತ್ ಬ್ರಹ್ಮನ ರೂಪ ಭೂಮಂಡಲದ ಪ್ರತಿ ಜೀವಿಗಳಿಗೂ ಅವರ ಉಪದೇಶ ನೀಡಿದ್ದಾರೆ ಎಂದರು.

ರಾಘವೇಂದ್ರ ವಕೀಲ್ ಸ್ವಾಗತಿಸಿದರು, ವಿನುತ ಜೋಶಿ ವಂದಿಸಿದರು.ಪ್ರಮುಖರಾದ ಅಶೋಕ್ ಮಳ್ಳಿ, ಭೀಮರಾವ್ ಕುಲಕರ್ಣಿ, ವೆಂಕಟೇಶ್ ಕುಲಕರ್ಣಿ, ಭೀಮಸೇನರಾವ್ ಸಿಂಧಗೇರಿ, ವಾಸುದೇವರಾವ್ ಕುಳಗೇರಿ, ಅನಿಲ್ ಕುಲಕರ್ಣಿ,ಮಂಜುನಾಥ್ ಕುಲಕರ್ಣಿ, ಶ್ರೀರಾಮಾಚಾರ,ದಯಾಘನ್ ಧಾರ್ವಾಡ್ಕರ್, ಪ್ರಾಣೇಶ್ ಕುಲಕರ್ಣಿ, ಜನಾರ್ಧನ್ ಕುಲಕರ್ಣಿ, ಮಾರುತಿ ಕುಲಕರ್ಣಿ, ಸತ್ಯನಾರಾಯಣ ಜೋಶಿ, ವಿನುತ ಜೋಶಿ, ಪ್ರಮೋದ್ ಕಾಮನಟಗಿ, ರಮೇಶ್ ಕುಲಕರ್ಣಿ, ಶ್ರೀನಿವಾಸ್, ಶ್ರೀಮತಿ ಲಕ್ಷ್ಮಿ ಕುಲಕರ್ಣಿ ಶ್ರೀಮತಿ ಅಂಬುಜಾ ಸಿಂಧಗೇರಿ, ಶೀಲಾ ಜೋಶಿ ವಿಜಯಲಕ್ಷ್ಮಿ ಬಡಶೇಶಿ, ವಾಣಿ ಕುಲಕರ್ಣಿ ಇದ್ದರು.

# ಮಹಾರಾಷ್ಟ್ರದಲ್ಲಿ ಮುಂದುವರಿದ ಮಳೆ: ಕೃಷ್ಣಾ ನದಿ ಹರಿವಿನ ಪ್ರಮಾಣ ಹೆಚ್ಚಳ

**ಚಿಕ್ಕೋಡಿ :** ನೆರೆಯ ಮಹಾರಾಷ್ಟ್ರದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಮಳೆ ಮುಂದುವರೆದಿದ್ದು, ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯ ಕೃಷ್ಣಾ, ಧೂದಗಂಗಾ, ವೇದಗಂಗಾ ನದಿಗಳಲ್ಲಿ ನೀರು ಹರಿಯುವಿಕೆ ಪ್ರಮಾಣ ಸೋಮವಾರ ಮತ್ತಷ್ಟು ಏರಿಕೆಯಾಗಿದೆ.

ಮಹಾರಾಷ್ಟ್ರದ ಕೊಯ್ನಾದಲ್ಲಿ 72 ಮಿ.ಮೀ, ವಾರಣಾದಲ್ಲಿ 48 ಮಿ.ಮೀ, ಕಾಳಮ್ಮವಾಡಿಯಲ್ಲಿ 60 ಮಿ.ಮೀ, ಮಹಾಬಳೇಶ್ವರದಲ್ಲಿ 155 ಮಿ.ಮೀ, ನವಜಾದಲ್ಲಿ 97 ಮಿ.ಮೀ, ರಾಧಾನಗರಿಯಲ್ಲಿ 55 ಮಿ.ಮೀಯಷ್ಟು ಮಳೆ ಬೀಳುತ್ತಿದೆ.

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಕೃಷ್ಣಾ ನದಿಗೆ ಅಡ್ಡಲಾಗಿರುವ ರಾಜಾಪೂರೆ ಬ್ಯಾರೇಜ್‌ನಲ್ಲಿ 13,550 ಕ್ಯುಸೆಕ್ ಹೊರ ಹರಿವು ಇದ್ದು, ದೂಧಗಂಗಾ ನದಿಯಿಂದ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಗ್ರಾಮದ ಬಳಿಯಲ್ಲಿ 4,570 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಕೃಷ್ಣಾ ಹಾಗೂ ದೂಧಗಂಗಾ ನದಿಯ ಸಂಗಮ ಸ್ಥಳವಾಗಿರುವ ಕಲ್ಲೋಳ ಬ್ಯಾರೇಜ್ ಬಳಿಯಲ್ಲಿ 18,120 ಕ್ಯುಸೆಕ್ ನೀರು ಹರಿಯುತ್ತಿದೆ.

ಕೃಷ್ಣಾ ನದಿಗೆ ಅಡ್ಡಲಾಗಿರುವ 6 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಹಿಪ್ಪರಗಿ ಬ್ಯಾರೇಜ್‌ನಲ್ಲಿ 4 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಮಹಾರಾಷ್ಟ್ರದ ಕೊಯ್ನಾ, ಧೂಮ, ಕಣೇರ, ವಾರಣಾ, ಕಾಳಮ್ಮವಾಡಿ, ರಾಧಾನಗರಿ ಡ್ಯಾಂಗಳಲ್ಲೂ ನೀರು ಸಂಗ್ರಹ ಪ್ರಮಾಣ ಕಳೆದ 2–3 ದಿನಗಳಲ್ಲಿ ಮತ್ತಷ್ಟು ಹೆಚ್ಚಿದೆ.

# ಉಪಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಕೆಂಪೇಗೌಡ ಜಯಂತಿ ಕಾರ್ಯಕ್ರಮ



**ಕೊಪ್ಪಳ :** ಕೊಪ್ಪಳ ಉಪಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಜೂನ್ 27 ರಂದು ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಆಚರಿಸಲಾಯಿತು. ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಮಾತನಾಡಿದ ವಿಜ್ಞಾನ ಕೇಂದ್ರದ ಕ್ಯೂರೇಟರ್ ಮೈಲಾರಪ್ಪ ಅವರು, ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಹೆಸರು ಅವರು ಮಾಡಿದ ಜನಪರ ಯೋಜನೆಗಳಿಂದಾಗಿ ನಾಡಿನ ಇತಿಹಾಸದಲ್ಲಿ ಅಜರಾಮರವಾಗಿ ಉಳಿದಿದೆ. ಇಂತಹ ಬೃಹತ್ ನಗರವನ್ನು ಮುಂದಾಲೋಚನೆಯಿಂದ ತುಂಬಾ ಯೋಜನಾಬದ್ಧವಾಗಿ ಕಟ್ಟಿದ ನಾಡಪ್ರಭು ಕೆಂಪೇಗೌಡರ ಸಾಹಸಗಾಥೆ ನಮಗೆಲ್ಲರಿಗೂ ಮಾದರಿಯಾಗಿದೆ ಎಂದು ಕೆಂಪೇಗೌಡರ ಕೊಡುಗೆಗಳ ಬಗ್ಗೆ, ಅವರ ಜೀವನ ಚರಿತ್ರೆಯ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಉಪಪ್ರಾದೇಶಿಕ ವಿಜ್ಞಾನ ಕೇಂದ್ರದ ಶಿಕ್ಷಣ ಸಹಾಯಕ ಫಕೀರಸಾಬ್, ತಾಂತ್ರಿಕ ಸಹಾಯಕ ಮಹಾಲಿಂಗಪ್ಪ, ತಂತ್ರಜ್ಞ ಶಂಕ್ರಪ್ಪ, ನಿಯೋಜಿತ ಸಿಬ್ಬಂದಿ ಫಯಾಜುದ್ದೀನ್, ಗೋಪಾಲರಾವ್ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜಿಲ್ಲಾ ಪ್ರಯೋಗಾಲಯದ ಕಿರಿಯ ವಿಶ್ಲೇಷಣೆಗಾರರಾದ ರುಕ್ಮಿಣಿ, ಭೂವಿಜ್ಞಾನಿ ನಬೀರ್ ಅಸುಲ್, ನೀರಿನ ಮಾದರಿಗಳ ಸಂಗ್ರಹಕೋಶ ಉಸ್ತುವಾರಿ ಅರ್ಜುನ್, ನೀರಿನ ಮಾದರಿ ಸಂಗ್ರಹಗಾರ ಭಾಷಾಸಾಬ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕನ್ನಡ ಸಾಹಿತ್ಯಲೋಕಕ್ಕೆ ರಾಗಂ ಅವರ ಕೊಡುಗೆ ಅಪಾರ: ವೀರೇಶ್ವರ ದೇವರು

**ಅಥಣಿ :** ಕನ್ನಡ ಸಾಹಿತ್ಯಲೋಕಕ್ಕೆ ರಾಗಂ ಅವರ ಕೊಡುಗೆ ಅಪಾರವಾಗಿದ್ದು, ಅವರ ಕೃತಿಗಳಲ್ಲಿ ಪ್ರಸ್ತುತ ಬದುಕಿಗೆ ಬೇಕಿರುವ ಮೌಲ್ಯಯುತ ಸಂದೇಶ, ಸಾಮಾಜಿಕ ನ್ಯಾಯ, ಪ್ರೀತಿ, ಪ್ರೇಮ, ಪ್ರಾಕೃತಿಕ ಕಾಳಜಿ ಎದ್ದು ಕಾಣಿಸುತ್ತವೆ ಎಂದು ತೆಲಸಂಗ ಹಿರೇಮಠದ ವೀರೇಶ್ವರ ದೇವರು ಹೇಳಿದರು.

ಅವರು ಶನಿವಾರ ತಾಲೂಕಿನ ತೆಲಸಂಗ ಗ್ರಾಮದಲ್ಲಿ ಡಾ.ರಾಜಶೇಖರ ಮಠಪತಿ (ರಾಗಂ) ಅವರ 101 ನೇಯ ವಿಜಯಪೂರ ಜ್ಞಾನಯೋಗಾಶ್ರಮದ ಪ.ಪೂ.ಶ್ರೀ.ಶಿದ್ಧೇಶ್ವರ ಶ್ರೀಗಳ ಜೀವನಾಧಾರಿತಕೃತಿಯೋಗಸ್ಥಸಂತೆಯಿಂದ ಸಂತ ನೆಡೆಗೆ ಗ್ರಂಥ ಬಿಡುಗಡೆ ಸಮಾರಂಭದ ಸಾನಿಧ್ಯವಹಿಸಿ ಮಾತನಾಡಿದರು.



ಸಂಸಾರದ ಜಂಜಾಟಗಳನ್ನು ತ್ಯಜಿಸಿ ಲೋಕ ಕಲ್ಯಾಣದಲ್ಲಿ ಮುಳಿಗಿದವನೇ ಯೋಗಸ್ಥನಾಗುತ್ತಾನೆ. ಕೈಯಲ್ಲಿ ಮೊಬೈಲ್ ಹಿಡಿಯುವುದೇ ಫ್ಯಾಷನ್ ಆಗಿರುವ ಇಂದಿನ ಆಧುನಿಕ ಯುಗದಲ್ಲಿ ಪುಸ್ತಕ ಯಾರಿಗೂ ಬೇಡವಾಗಿದೆ. ಮೌಲ್ಯಯುತವಾದ ಪುಸ್ತಕ ಓದಿದರೆ ಜೀವನ ಏನೆಂಬುದು ತಿಳಿಯುತ್ತದೆ. ಮಕ್ಕಳಿಗೆ ಓದುವ ಅಭಿರುಚಿ ಮೂಡಿಸಿ ಬೆಳಸಬೇಕಿರುವುದು ಇಂದಿನ ಅಗತ್ಯತೆಯಲ್ಲಿ ಒಂದಾಗಿದೆ ಎಂದರು.

ಬೆಂಗಳೂರಿನ ಅಧ್ಯಾತ್ಮಿಕ ಚಿಂತಕ ಜಂಬುನಾಥ ಮಳಿಮಠ ಮಾತನಾಡಿ, ಯೋಗಸ್ಥ ಕೃತಿಯಲ್ಲಿ ಬದುಕು ಮತ್ತು ಕೃತಿ ಒಂದಾಗಿ. ಕೆಲಸ ಮಾಡಿದೆ. ಈ ಮಣ್ಣಿನ ಗುಣದಲ್ಲಿ. ಸಂಸ್ಕೃತಿ, ಸಾಹಿತ್ಯದ ಸತ್ವವಿದೆ. ಧರ್ಮ ಮತ್ತು ಗುರು ಪರಂಪರೆಯಲ್ಲಿ ಚಿಂತಿಸಿದಾಗ ಮಾತ್ರ ಯೋಗಸ್ಥದಂತಹ ಮೌಲ್ಯಯುತವಾದ ಕೃತಿ ಹೊರಹೊಮ್ಮಲು ಸಾಧ್ಯ. ಭಾರತದ ನಾಗರಿಕತೆಗೆ ಧರ್ಮವೇ ಪ್ರಧಾನವಾಗಿದೆ. ಈ ಧರ್ಮವು ವೇದ ಉಪನಿಷತ್‌ಗಳ ಮೇಲೆ ನಿಂತಿದೆ. ದೈವ ಮತ್ತು ಧರ್ಮಕ್ಕೆ ತಲೆ ಬಾಗಿದರೆ ಯಾವ ರಾಹುಕೇತಗಳು ಏನೂ ಮಾಡಲು ಸಾಧ್ಯವಿಲ್ಲ. ಬರಲಿರುವ 2048 ರೊಳಗಾಗಿ ಭಾರತ ದೇಶವು ಆರ್ಥಿಕ ಭದ್ರತೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಸಶಕ್ತ ಭಾರತವಾಗಲಿದೆ ಎಂದರು.

ಲೇಖಕಡಾ.ರಾಜಶೇಖರಮಠಪತಿ(ರಾಗಂ) ಮಾತನಾಡಿ, ಈ ತೆಲಸಂಗದ ಮಣ್ಣಿನ ವಾಸನೆಯ ಗುಣ ಅನ್ನದ ಫಲದಿಂದ 101 ಕೃತಿಗಳನ್ನು ರಚಿಸಲು ಸಾಧ್ಯವಾಯಿತು. ನನ್ನ ಹುಟ್ಟೂರಿನ ವೇದಿಕಗಳ ಉಪನ್ಯಾಸ ಹಾಗೂ ಸಾಹಸಗಳ ಮೊದಲ ಹೆಜ್ಜೆ ಆಗಿದ್ದು. ಯೋಗಸ್ಥ ಕೃತಿ ಹೊರಬರಲು ಕವಿ ಶಿವಪ್ರಕಾಶ ಅವರ ಮಾತುಗಳೇ ಮಾರ್ಗದರ್ಶಿಯಾದವು ಎಂದರು.

ರಾಜ್ಯ ವಿಷ್ಣೂ ಸೇನೆ ಹಾಗೂ ವೀರ ಲೋಕ ಪ್ರಕಾಶನದ ರಾಜ್ಯಾಧ್ಯಕ್ಷ ವಿ.ಶ್ರೀನಿವಾಸ ಮಾತನಾಡಿ, ರಾಜ್ಯದಲ್ಲಿ 8 ಸಾವೀರ ಪುಸ್ತಕಗಳು ಪ್ರತಿವರ್ಷ ಪ್ರಕಟವಾಗುತ್ತವೆ. ಐದು ನೂರು ಮಾತ್ರ ಮಾರಾಟವಾಗುತ್ತವೆ. ಪುಸ್ತಕದ ಪ್ರೀತಿಯನ್ನು ಬೆಳೆಸಿಕೊಂಡು, ನಮ್ಮಲ್ಲಿ ಆಳವಾಗಿ ಅದನ್ನು ಇಳಿಸಿಕೊಂಡಾಗ ಮಾತ್ರ ಸಾಹಿತ್ಯದ ಅರಿವಾಗಲು ಸಾಧ್ಯ ಎಂದರು.

ಬಾಗಲಕೋಟೆಯ ಕೃಷ್ಣಾನಂದ ಶರಣರು ಕೃತಿ ಪರಿಚಯಿಸಿ ಮಾತನಾಡಿ, ಶ್ರಾವಣ ಮಾಸದಲ್ಲಿ ಕೇವಲ ಪ್ರವಚನ ಪ್ರಾರಂಬಿಸವುದು ಮಾತ್ರ ನೋಡುತ್ತೇವೆ. ಬದಲಾಗಿ ಒಳ್ಳೋಳ್ಳೆಯ ಕೃತಿಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಓದುವ ಮಾಸ ಅಂತ ಆಚರಣೆ ಮಾಡುವ ಮೂಲಕ ಓದಲು ಪ್ರೇರೆಪಿಸಿ ಸಾಹಿತ್ಯ ಕ್ಷೇತ್ರ ಶ್ರೀಮಂತಗೊಳಿಸಿರಿ. ಒಂದು ಲೇಖನ ಕೃತಿ ಮೇರು ಗ್ರಂಥವಾಗಲು ಬರಹಗಾರನಿಗೆ ಇಚ್ಛಾಶಕ್ತಿಬೇಕು. ಅಂತಹ ಇಚ್ಛಾಶಕ್ತಿ ರಾಗಂ ಅವರ ಕೃತಿಯಲ್ಲಿ ಕಂಡು ಬಂದಿದೆ.

ನ್ಯಾಯವಾದಿ ಅಮೋಘ ಖೊಬ್ರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಶರಾಜ್ ಪರಣ್ಣವರ, ಆರ್.ಕೆ.ಕುಲಕರ್ಣಿ, ಎಮ್.ಎಸ್.ಮಧಭಾವಿ, ಬಸವರಾಜ ಭಗವತಿ. ನ್ಯಾಯವಾದಿ ದಾನೇಶ ಅವಟಿ, ಸಂತೋಷ ಹತ್ತಿ, ಶೇಖರ ರೋಡಗಿ ಸೇರಿದಂತೆ ಇತರರು ಇದ್ದರು. ಅಶೋಕ ಪರುಶೆಟ್ಟಿ ನಿರೂಪಿಸಿದರು. ಡಾ.ಬಿ.ಎಸ್. ಕಾಮನ್ ಸ್ವಾಗತಿಸಿ ವಂದಿಸಿದರು.

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ: ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ/ಬಾಲಕೀಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2024–25ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜುಲೈ 10 ಕೊನೆಯ ದಿನಾಂಕವಾಗಿದ್ದು, ಪ್ರವರ್ಗ–1, ಎಸ್.ಸಿ. & ಎಸ್.ಟಿ. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ ರೂ. 1ಲಕ್ಷ ಮತ್ತು ಪ್ರವರ್ಗ–2ಎ, 2ಬಿ, 3ಎ, 3ಬಿ ಇತರೆ ಹಿಂದುಳಿದ ವರ್ಗ ಹಾಗೂ ಇತರೆ ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ ರೂ. 44,500 ಒಳಗಿರಬೇಕು.

ಅರ್ಜಿಯನ್ನು ಇಲಾಖೆಯ ವೆಬ್‌ಸೈಟ್ https://shp.karnataka.gov.in/bcwd ನಲ್ಲಿ ಸಲ್ಲಿಸಬೇಕು. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ www.bcwd.karnataka.gov.in ನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ ಇ–ಮೇಲ್ bcwd-helpline@gmail.com ಮುಖಾಂತರ ಅಥವಾ ಜಿಲ್ಲಾ/ ತಾಲ್ಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು. ಸಹಾಯವಾಣಿ ಸಂಖ್ಯೆ 8050770004 & 8050770005 ಆಗಿರುತ್ತದೆ ಎಂದು ಕೊಪ್ಪಳ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಹದ್ದೂರ್‌ಬಂಡಿ ಗ್ರಾಮದಲ್ಲಿ ದಂಪತಿ ಸಂಪರ್ಕ ಪಾಕ್ಷಿಕ ದಿನಾಚರಣೆ

**ಕೊಪ್ಪಳ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಿರೇಸಿಂದೋಗಿ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಬಹದ್ದೂರ್‌ಬಂಡಿ ಗ್ರಾಮ ಪಂಚಾಯತ್ ಕಾರ್ಯಾಲಯ ಸಂಯುಕ್ತಾಶ್ರಯದಲ್ಲಿ ಜುಲೈ 01 ರಿಂದ ಜು.11 ರವರೆಗೆ ನಡೆಯುವ ವಿಶ್ವ ಜನಸಂಖ್ಯಾ ದಿನಾಚರಣೆ ಅಂಗವಾಗಿ ಬಹದ್ದೂರ್‌ಬಂಡಿ ಗ್ರಾಮದ ಆಯುಷ್ಮಾನ್ ಭಾರತ್ ಆರೋಗ್ಯ ಮಂದಿರದಲ್ಲಿ ಸೋಮವಾರ "ದಂಪತಿ ಸಂಪರ್ಕ ಪಾಕ್ಷಿಕ" ಕಾರ್ಯಕ್ರಮ ಆಚರಿಸಲಾಯಿತು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶಿವಾನಂದ ಫ್ಹಿ.ಪಿ ಅವರು ಮಾತನಾಡಿ, ಪ್ರತಿ ವರ್ಷ ಜೂನ್ 27 ರಿಂದ ಜುಲೈ 10 ರವರೆಗೆ "ವಿಶ್ವ ಜನಸಂಖ್ಯಾ ದಿನಾಚರಣೆ" ಅಂಗವಾಗಿ "ದಂಪತಿ ಸಂಪರ್ಕ ಪಾಕ್ಷಿಕ" ಕಾರ್ಯಕ್ರಮ ಹಮ್ಮಿಕೊಂಡು ಅರ್ಹ ದಂಪತಿಗಳಿಗೆ ಹಾಗೂ ಯುವ ಜನತೆಗೆ ಅರಿವು ಮೂಡಿಸಲಾಗುತ್ತದೆ. ವಿಶ್ವದ ಜನಸಂಖ್ಯೆಯು 1987 ರಲ್ಲಿ 500 ಕೋಟಿ ದಾಟಿದಪ್ರಯುಕ್ತ, ಪ್ರತಿವರ್ಷ ಜುಲೈ 11 ರಂದು ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಮುದಾಯದ ಜನಪ್ರತಿನಿಧಿಗಳೊಂದಿಗೆ ಜಾಗೃತಿ ಮೂಡಿಸಲಾಗುತ್ತದೆ.



ಜನಸಂಖ್ಯೆ ಹೆಚ್ಚಳದಿಂದ ದೇಶದ ಅಭಿವೃದ್ಧಿಯಲ್ಲಿ ಕುಂಟಿತಗೊಳ್ಳುತ್ತದೆ ಹಾಗೂ ನಾನಾ ರೀತಿಯ ಸಮಸ್ಯೆಗಳನ್ನು ಅನುಭವಿಸಬೇಕಾಗುತ್ತದೆ. ಈ ವರ್ಷದ ಘೋಷವಾಕ್ಯವು "ಅಭಿವೃದ್ಧಿ ಹೊಂದಿದ ಭಾರತದ ಹೊಸ ಗುರುತಿಗಾಗಿ ಕುಟುಂಬ ಯೋಜನೆ ಅಳವಡಿಕೆ ಪ್ರತಿ ದಂಪತಿಗಳ ಹೆಮ್ಮೆ" ಎಂಬುದಾಗಿದೆ. ಒಂದು ಕುಟುಂಬಕ್ಕೆ 01 ಅಥವಾ 02, ಹೆಣ್ಣಿರಲಿ–ಗಂಡಿರಲಿ ಮಕ್ಕಳು ಎರಡೇ ಇರಲಿ. ಸರ್ಕಾರಿ ನಿಗದಿ ಪಡಿಸಿದ ವಯಸ್ಸಿಗೆ ಮದುವೆ ಮಾಡಬೇಕು. ಬಾಲ್ಯ ವಿವಾಹ ಮಾಡಬಾರದು. ಬಾಲ್ಯ ವಿವಾಹ ಕಾನೂನು ಬಾಹೀರ. ಬಾಲ್ಯ ವಿವಾಹ ಮಾಡುವುದರಿಂದ ಸತಿ–ಪತಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಕನಿಷ್ಠ 03 ವರ್ಷ ಅಂತರ ಕಾಪಾಡಲು ಕುಟುಂಬ ಕಲ್ಯಾಣ ಕಾರ್ಯಕ್ರಮದ ತಾತ್ಕಾಲಿಕ ನೂತನ ವಿಧಾನಗಳಾದ ಅಂತರ ಚುಚ್ಚುಮದ್ದು, ಛಾಯಾ ನುಂಗುವ ಮಾತ್ರೆ, ಮಾಲಾ–ಎನ್ ಮಾತ್ರೆ ಹಾಗೂ ಪಿ.ಪಿ.ಐ.ಯು.ಸಿ.ಡಿ (ವಂಕಿದಾರಣೆ) ಇವುಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ. ಅರ್ಹ ದಂಪತಿಗಳು ಅವುಗಳನ್ನು ಅಳವಡಿಸಿಕೊಂಡು ತಮ್ಮ ಕುಟುಂಬವನ್ನು ಸುಖಿ ಕುಟುಂಬವನ್ನಾಗಿ ಮಾಡಿಕೊಳ್ಳಬೇಕು ಮತ್ತು ಶಾಶ್ವತ ವಿಧಾನಗಳಾದ ಮಹಿಳೆಯರಿಗೆ ಉದರ ದರ್ಶಕ ಶಸ್ತ್ರಚಿಕಿತ್ಸೆ ಹಾಗೂ ಪುರುಷರಿಗೆ ವ್ಯಾಸಕ್ಟಮಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಾರ್ವಜನಿಕರಿಗೆ ತಿಳಿಸಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಗಂಗಮ್ಮ ಅವರ ಮಾತನಾಡಿ, ವಿಶ್ವದ ಜನಸಂಖ್ಯೆಯಲ್ಲಿ ಭಾರತ ಮೊದಲನೇ ಸ್ಥಾನದಲ್ಲಿದೆ. ಚೀನಾ ದೇಶ ಎರಡನೇ ಸ್ಥಾನದಲ್ಲಿದೆ. ಜನಸಂಖ್ಯೆ ಹೆಚ್ಚಳಕ್ಕೆ ಕಾರಣಗಳಾದ ಮೂಡನಂಬಿಕೆ, ಅಜ್ಞಾನ, ಅನಕ್ಷರತೆ, ಬಡತನ, ಮಾಹಿತಿ ಕೊರತೆದಿಂದ ಜನಸಂಖ್ಯೆ ಹೆಚ್ಚಳವಾಗುತ್ತದೆ. ಜನಸಂಖ್ಯೆ ಸ್ಫೋಟದಿಂದ ಶೈಕ್ಷಣಿಕ, ಆರ್ಥಿಕ, ಧಾರ್ಮಿಕ, ಸಮಾಜದ ಅಸಮಾನತೆ, ನಿರುದ್ಯೋಗ ಸಮಸ್ಯೆ ಉಂಟಾಗುತ್ತವೆ. ಆದ್ದರಿಂದ ಜನಸಂಖ್ಯೆ ನಿಯಂತ್ರಣಕ್ಕಾಗಿ ಬಾಲ್ಯ ವಿವಾಹ ಮಾಡಬಾರದು ಎಂದು ಹೇಳಿ, ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಅಂತರ ಕಾಪಾಡಲು ಕುಟುಂಬ ಯೋಜನೆಯ ತಾತ್ಕಾಲಿಕ ಮತ್ತು ಶಾಶ್ವತ ವಿಧಾನಗಳ ಮಾದರಿಗಳನ್ನು ತೊರಿಸುತ್ತಾ ದಂಪತಿಗಳಿಗೆ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಗ್ರಾ.ಪಂ ಸದಸ್ಯರಾದ ಮಹಮ್ಮದ್ ರಫೀ, ಮಂಜುನಾಥ, ಶೇಖರಪ್ಪ, ಗುರುಮೂರ್ತಿಯ್ಯ, ಕೆಂಚಮ್ಮ, ಮಹೆಬೂಬ್‌ಬೀ, ಪ್ರಾಥಮಿಕ ಆರೋಗ್ಯ ಸುರಾಕ್ಷಾಧಿಕಾರಿ ಪ್ರಭಾವತಿ, ಸಮುದಾಯ ಆರೋಗ್ಯಾಧಿಕಾರಿಗಳು, ಆರೋಗ್ಯ ನಿರೀಕ್ಷಣಾ ಅಧಿಕಾರಿಗಳಾದ ವಿಜಯಲಕ್ಷ್ಮೀ, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಗರ್ಭಿಣಿ, ಭಾಣಂತಿಯರು, ಸಾರ್ವಜನಿಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ರಸ್ತೆ ಅಗಲೀಕರಣಕ್ಕಾಗಿ ಕರ್ನಾಟಕ ಶಕ್ತಿ ಸೇನೆ ಕಾರ್ಯಕರ್ತರಿಂದ ಮನವಿ

**ಮಹಾಲಿಂಗಪುರ :** ಪಟ್ಟಣದ ಬಸವೇಶ್ವರ ವೃತ್ತದಿಂದ ಎಪಿಎಂಸಿ ದ್ವಾರ ಬಾಗಿಲುವರೆಗೆ ನಡೆದಿರುವ ರಸ್ತೆ ಕಾಮಗಾರಿಯು ಕಳೆದ ಎರಡು ವರ್ಷಗಳಿಂದ ನಡೆದಿರುವ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು. ರಾಜ್ಯ ಹೆದ್ದಾರಿ ನಿಯಮಾವಳಿಯಂತೆ ರಸ್ತೆಯನ್ನು ಅಗಲೀಕರಣ ಮಾಡಬೇಕೆಂದು ಒತ್ತಾಯಿಸಿ ಮಂಗಳವಾರ ಕರ್ನಾಟಕ ಶಕ್ತಿಸೇನೆಯ ಕಾರ್ಯಕರ್ತರು ಪುರಸಭೆ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಸೇನೆಯ ಸ್ಥಳಿಯ ಘಟಕದ ಅಧ್ಯಕ್ಷ ಜೀತು ಕೆಸರಗೊಪ್ಪ ಮಾತನಾಡಿ ಕೆಲವು ಪ್ರಭಾವಿಗಳ ಒತ್ತಡಕ್ಕೆ ಮಣಿದು ಗುತ್ತಿಗೆದಾರರು ಮೊದಲಿದ್ದ ಚರಂಡಿಗಿಂತ 5 ಅಡಿ ಒಳಗೆ ಚರಂಡಿ ನಿರ್ಮಿಸುತ್ತಿದ್ದಾರೆ. ಈ ರಸ್ತೆಯಲ್ಲಿ ಬ್ಯಾಂಕಗಳು, ಎಪಿಎಂಸಿ ಮಾರುಕಟ್ಟೆ, ಸರ್ಕಾರಿ ಆಸ್ಪತ್ರೆಗೆ



ಹೋಗುವ ರಸ್ತೆಯಾದ್ದರಿಂದ ವಿಪರೀತ ಟ್ರಾಫೀಕ್ ಸಮಸ್ಯೆಯಾಗುತ್ತಿದೆ. ಇನ್ನು ಮೊದಲಿಗಿಂತ ರಸ್ತೆ ಕಿರಿದಾದರೆ ಮತ್ತಷ್ಟು ಸಮಸ್ಯೆಯಾಗುತ್ತದೆ. ಅದಕ್ಕಾಗಿ ಮೊದಲಿದ್ದ ಚರಂಡಿವರೆಗೆ ರಸ್ತೆಯನ್ನು ಅಗಲೀಕರಣಗೊಳಿಸಬೇಕೆಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಮಾತನಾಡಿ ಚರಂಡಿ ಒಳಗೆ ನಿರ್ಮಿಸುತ್ತಿರುವ ಕಾರಣ ಪುರಸಭೆಯಿಂದಲೇ ತಕರಾರು ನೀಡಿ ಕಾಮಗಾರಿಯನ್ನು ತಡೆ ಹಿಡಿಯಲಾಗಿದೆ. ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಗಮನಕ್ಕೆ ತರಲಾಗಿದೆ. ಮೊದಲಿಂದ ಚರಂಡಿವರೆಗೆ ರಸ್ತೆ ಅಗಲೀಕರಣದೊಂದಿಗೆ ಶೀಘ್ರ ಕಾಮಗಾರಿಯನ್ನು ಪೂರ್ಣಗೊಳಿಸಲಿದ್ದಾರೆ ಎಂದರು.

ಆನಂದ ಗಾಡಿವಡ್ಡರ, ಕಿರಣ ಸಂಕೇಶ್ವರ, ಪ್ರತಾಪ ಡಾಂಗರೆ, ಶ್ರೀನಿವಾಸ ಸಬಕಾಳೆ, ಮೋಮಿನ ಗದ್ಯಾಳ, ಈರಪ್ಪ ದಢೂತಿ, ಕಾರ್ತಿಕ ಗುಡ್ಲಿ, ಸೈಪ್ ಅಲಿ ನಾಯಕವಾಡಿ, ಮಹಾಲಿಂಗ ಉಪ್ಪಾರಟ್ಟಿ, ಮಂಜು ಸೈದಾಪೂರ, ಅಲ್ಲಾಭಕ್ಷ ಸೈದಾಪೂರ, ಅಭಿ ಸೊನ್ನದ, ಅಭಿ ಇಂಬಗಿ, ಸಪೀಲ ಯಾದವಾಡ ಸೇರಿದಂತೆ ಹಲವರು ಇದ್ದರು.

# ಧರ್ಮಸ್ಥಳ ಸಿರಿ ಮಿಲೆಟ್ ಹೌಸ್‌ನ ಮಳಿಗೆ ಉದ್ಘಾಟನೆ



**ವಿಜಯಪುರ :** ಇಲ್ಲಿನ ಐತಿಹಾಸಿಕ ಗೋಲಗುಮ್ಮಟ ಎದುರು ವಿಜಯಾಂಬ ಸಿರಿ ಮಿಲೆಟ್ ಹೌಸ್ ನ ಮಳಿಗೆಯನ್ನು ನಿವೃತ್ತ ಪೊಲೀಸ್ ಅಧಿಕಾರಿ ಲಕ್ಷ್ಮಣ ಎಸ್. ಇಂಚೂರ್ ಇತ್ತೀಚೆಗೆ ಉದ್ಘಾಟಿಸಿದರು. ಅವರು ಸಂಪ್ರದಾಯ ಆಹಾರ ಬಳಸಿದರೆ, ಸದೃಢ ಅರೋಗ್ಯ, ಆಯುಸ್ಸು ವೃದ್ಧಿಯಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು.

ಕಾರ್ಯಕ್ರಮದಲ್ಲಿ ಸಿರಿ ಮಿಲೆಟ್ ಯೋಜನಾಧಿಕಾರಿ ಮಹಾಂತೇಶ ಎಂ. ರವರು ಮಾತನಾಡಿ, ಪೂಜ್ಯ ಮಾತೋಶ್ರೀ ಅಮ್ಮನವರ ಆಶಯ ಪೌಷ್ಠಿಕಾಂಶ ಭರಿತ ಸಿರಿಧಾನ್ಯಗಳನ್ನು ರೈತರಲ್ಲಿ ಬೆಳೆಸುವಲ್ಲಿ ಪ್ರೋತ್ಸಾಹ ನೀಡುವುದು. ರೈತರಿಗೆ ಯೋಗ್ಯ ಬೆಲೆ ಒದಗಿಸುವುದು ಸಮಾಜಕ್ಕೆ ಪೌಷ್ಠಿಕಾಂಶಯುಕ್ತ ಆಹಾರ ಒದಗಿಸುವ ಮೂಲಕ ಆರೋಗ್ಯ ಭದ್ರತೆಯನ್ನು ಒದಗಿಸುವುದಾಗಿದೆ ಎಂದರು. ಇದರೊಂದಿಗೆ ಸಿರಿಧಾನ್ಯಗಳನ್ನು ಆಹಾರವಾಗಿ ಬಳಕೆ ಮಾಡುವ ಬಗ್ಗೆ ಮಾಹಿತಿ ನೀಡಿದರು. ವಿಜಯಪುರ ಜಿಲ್ಲಾ ಸಿರಿಧಾನ್ಯ ವಿತರಕರಾದ ನಾಗರಾಜ್ ಅಣೆಪ್ಪನವರ ಅವರು , ಸಿರಿಧಾನ್ಯ ಬಳಕೆಯಿಂದ ಆರೋಗ್ಯ ಕಾಪಾಡಿಕೊಳ್ಳಿರಿ. ತಾಯಂದಿರು ಇದನ್ನು ಹೆಚ್ಚು ಬಳಕೆ ಮಾಡಿಕೊಂಡು ರೋಗದಿಂದ ಮುಕ್ತರಾಗಬಹುದು. ಇಲ್ಲಿ ಅತೀ ಹೆಚ್ಚು ಜೋಳ, ಸಜ್ಜೆ ಬಳಕೆ ಮಾಡುತ್ತೇವೆ. ಆದರೆ ಇಂದಿನ ಯುವ ಪೀಳಿಗೆ ಪಾಸ್ಟ್ ಫುಡ್ ಬಳಕೆಯಿಂದ ಪೌಷ್ಟಿಕತೆಯ ಕೊರತೆಯಿಂದ ಬಳಲುತ್ತಿದ್ದಾರೆ. ಸಿರಿಧಾನ್ಯ ಬಳಕೆ ಮಾಡುವುದರಿಂದ ನಮ್ಮ ರೈತರಿಗೆ ಬೆಂಬಲ ನೀಡಬಹುದು.

ಇಂತಹ ಕಾರ್ಯ ಮಾಡುತ್ತಿರುವ ಧರ್ಮಸ್ಥಳದ ಪೂಜ್ಯ ಡಿ. ವೀರೇಂದ್ರ ಹೆಗ್ಗಡೆಯವರಿಗೆ ಕೋಟಿ ಕೋಟಿ ನಮನಗಳು ಎಂದು ಸಂತೋಷ ವ್ಯಕ್ತಪಡಿಸಿದರು.

ಯೋಜನಾಧಿಕಾರಿ ಸಂಗಪ್ಪ ಮಾತನಾಡಿ, ಸಿರಿಧಾನ್ಯ ಬೆಳಸುವಲ್ಲಿ ರೈತರ ಸಂಘಟನೆ ಮಾಡಿ ತರಬೇತಿ ನೀಡಿ ಸಿರಿಧಾನ್ಯ ಬೆಳಸಿ ಖರೀದಿಸಿ ಮೌಲ್ಯವರ್ಧನ ಉತ್ಪನ್ನಗಳನ್ನು ರಾಜ್ಯ ವ್ಯಾಪ್ತಿ "ಸಿರಿ ಮಿಲೆಟ್ ಹೌಸ್" ಮುಖಾಂತರ ಕಾರ್ಯ ಮಾಡುತ್ತಿರುವ ಮಲ್ಲಿಕಾರ್ಜುನ ಗಾಣಿಗೇರ ಇವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಪ್ರಕಾಶ್ ರಾಠೋಡ್ ಮತ್ತು ಯೋಜನಾಧಿಕಾರಿ ಸತೀಶ್, ಕೃಷ್ಣಮೂರ್ತಿ, ಸಿರಿಮಿಲೆಟ್ ಹೌಸ್ ಮಾಲಿಕರಾದ ಮಲ್ಲಿಕಾರ್ಜುನ ಗಾಣಿಗೇರ ಶ್ರೀಮತಿ ಸುಮಿತ್ರಾ ಉಪಸ್ಥಿತರಿದ್ದರು. ಸಿರಿಮಿಲೆಟ್ ಮಾರುಕಟ್ಟೆ ಮೇಲ್ವಿಚಾರಕ ಸುನಿಲ್ ಕುಮಾರ್ , ವಲಯ ಮೇಲ್ವಿಚಾರಕರಾದ ಕಲ್ಲಪ್ಪ, ಶ್ರೀಮತಿ ಗಂಗಮ್ಮ , ಮಂಜುಳಾ, ಗಣೇಶ್, ದುರ್ಗಪ್ಪ , ಕೃಷಿ ಮೇಲ್ವಿಚಾರಕರಾದ ಉಮೇಶ್, ವೆಂಕಟೇಶ್ ಮತ್ತು ಸೇವಾ ಪ್ರತಿನಿಧಿಗಳು ಸಹಕರಿಸಿದರು.

## ತೇರದಾಳದಲ್ಲಿ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿ

# ಸೆಮಿಫೈನಲ್ ಪ್ರವೇಶಿಸಿದ ದಾನಿಗೊಂಡ ಮಹಿಳೆಯರ ತಂಡ

**ತೇರದಾಳ :** ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿರುವ ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯಗಳ ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಯ ಮಹಿಳಾ ವಿಭಾಗದ ಕ್ವಾಟರ್ ಫೈನಲ್ ಪಂದ್ಯದಲ್ಲಿ ತೇರದಾಳ ದಾನಿಗೊಂಡ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ತಂಡ ಹಾವೇರಿಯ ಹಿಮ್ಸ್ ಆಫ್ ಮೆಡಿಕಲ್ ಕಾಲೇಜ್ ತಂಡವನ್ನು 2–0 ಅಂತರದಿಂದ ಮಣಿಸುವ ಮೂಲಕ ಸೆಮಿಫೈನಲ್ ಪ್ರವೇಶ ಮಾಡಿದೆ.

ಮೂರು ಸುತ್ತು ಪಂದ್ಯದಲ್ಲಿ ಎರಡು ನೇರ ಸೆಟ್‌ಗಳಿಂದ ಹಾವೇರಿ ತಂಡವನ್ನು ದಾನಿಗೊಂಡ ಕಾಲೇಜ್ ತಂಡ ಸೋಲಿಸಿತು. ಎರಡನೇ ಸುತ್ತಿನ ಆಟದಲ್ಲಿ ಎರಡು ತಂಡಗಳು ಸಾಕಷ್ಟು ಜಿದ್ದಾಜಿದ್ದಿಯಿಂದ ಸೆಣಸಾಟ ನಡೆಸಿದವು. ಎರಡು ತಂಡಗಳ ಪೈಪೋಟಿಯನ್ನು ಕಂಡ ಪ್ರೇಕ್ಷಕರು ತುದಿಗಾಲಿನ ಮೇಲೆ ನಿಂತು ಪಂದ್ಯ ವೀಕ್ಷಣೆ ಮಾಡಿ ಕೇಕೆ ಹಾಕಿದರು.

ವ್ಯವಸ್ಥೆಗೆ ಪುಲ್ ಪೀದಾ–ರಾಜ್ಯದ ಬೆಂಗಳೂರು, ಮೈಸೂರು, ಶಿವಮೊಗ್ಗ, ಹಾಸನ, ಧಾರವಾಡ, ಚಿತ್ರದುರ್ಗ, ದೊಡ್ಡಬಳ್ಳಾಪುರ, ವಿಜಯಪುರ,



ಬಾಗಲಕೋಟೆ, ಬೆಳಗಾವಿ, ಹಾವೇರಿ ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಿಂದ ಸುಮಾರು ಎರಡು ಸಾವಿರಕ್ಕೂ ಅಧಿಕ ಕ್ರೀಡಪಾಟುಗಳು ವಾಲಿಬಾಲ್ ಪಂದ್ಯಾವಳಿಗೆ ಆಗಮಿಸಿದ್ದು, ಪಂದ್ಯಾವಳಿ ಹಮ್ಮಿಕೊಂಡಿರುವ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ವ್ಯವಸ್ಥೆಗೆ ಕ್ರೀಡಾಪಟುಗಳು ಪುಲ್ ಪೀದಾಗೊಂಡಿದ್ದಾರೆ. ಅಚ್ಚುಕಟ್ಟಾದ ವಸತಿ ಕೊಠಡಿಗಳು, ಶೌಚಾಲಯ, ಸ್ನಾನಕ್ಕೆ ನೀರು, ವಿಶಾಲವಾದ ಮೈದಾನ ಹೀಗೆ ಎಲ್ಲ ವ್ಯವಸ್ಥೆಗೆ ಕ್ರೀಡಾಪಟುಗಳು ಖುಷ್ ಆಗಿದ್ದಾರೆ.

ರುಚಿಕರವಾದ ಊಟ–ಉಪಹಾರ– ಪಂದ್ಯಾವಳಿಗೆಆಗಮಿಸಿದಕ್ರೀಡಾಪಟುಗಳಿಗೆ ಉಪಹಾರಕ್ಕೆಉಪ್ಪಿಟ್ಟು,ಅವಲಕ್ಕಿ,ಪುಳಿವಗರೆ ಮದ್ಯಾಹ್ನ ಹಾಗೂ ರಾತ್ರಿ ಊಟಕ್ಕೆ ಚಪಾತಿ, ಎರಡು ತರಹದ ಪಲ್ಲೆ, ಕೇಸರಿಬಾತ್, ಶಾವಿಗೆ ಪಾಯಸ್, ಪಲಾವ್, ಅನ್ನ ಸಾಂಬರ. ಹಪ್ಪಳ, ಶಾಂಡಿಗೆ ಹೀಗೆ ಬಗೆ ಬಗೆಯ ಊಟ ಉಪಹಾರ ಕಲ್ಪಿಸಲಾಗಿದೆ. ಜತೆಗೆ ರಾತ್ರಿ ವೇಳೆ ಕ್ರೀಡಾಪುಗಳಿಗೆ ಮನರಂಜನೆ ಇರಲಿ ಎಂದು ದಾನಿಗೊಂಡ ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೂಡ ನಡೆಸಲಾಗುತ್ತಿದೆ. ಸಂಸ್ಥೆ ಚೇರಮನ್ ಡಾ. ಮಹಾವೀರ ದಾನಿಗೊಂಡ, ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ದಾನಿಗೊಂಡ ಮೇಲಿಂದ ಮೇಲೆ ಬೇಟಿ ನೀಡಿ ವ್ಯವಸ್ಥೆ ಕುರಿತು ಪರಿಶೀಲನೆ ನಡೆಸುತ್ತಿದ್ದಾರೆ. ಸಂಸ್ಥೆ ಎಲ್ಲ ಸಿಬ್ಬಂದಿ ವರ್ಗ ಪಂದ್ಯಾವಳಿ ಯಶಸ್ವಿಗೆ ಸಾಕಷ್ಟು ಮುತುವರ್ಜಿ ವಹಿಸುತ್ತಿದ್ದಾರೆ.

**ಅಭಿಪ್ರಾಯ :**

ನಾವು ಬೆಂಗಳೂರಿನಿಂದ ಪಂದ್ಯಾವಳಿಗೆ ಆಗಮಿಸಿದ್ದೇವೆ. ಇದೇನಪ್ಪ ಇಷ್ಟೊಂದು ದೂರ ಇದೆ. ಇಲ್ಲಿ ವ್ಯವಸ್ಥೆ ಊಟ ಹೇಗೆ ಇರುತ್ತದೆ ಏನೋ ಅಂದುಕೊಂಡಿದ್ದೇವು. ಆದರೆ ಇಂತಹ ಅಚ್ಚುಕಟ್ಟಾದ ವ್ಯವಸ್ಥೆ ಹಾಗೂ ರುಚಿಕರವಾದ ಊಟ ಉಪಹಾರ ನಿಜಕ್ಕೂ ನಮಗೆ ಬಹಳ ಇಷ್ಟವಾಯಿತು. ಸಂಸ್ಥೆ ಚೇರಮನ್ ಹಾಗೂ ವ್ಯವಸ್ಥಾಪಕ ನಿರ್ದೇಶಕರ ಕಾಳಜಿ ನಮ್ಮ ಕುಟುಂಬದವರಷ್ಟೇ ಚನ್ನಾಗಿ ಆಗಿದೆ.

– **ಕಾರ್ತಿಕ.** ಬೆಂಗಳೂರು ತಂಡದ ಕ್ರೀಡಾಪಟು.

# ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ

**ಬಾಗಲಕೋಟೆ :** ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ (ಪಿಯುಸಿ ಮತ್ತು ಪಿಯು ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾತಿ, ವರ್ಗ ಮತ್ತು ಇತರೆ ಜನಾಂಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ವಾರ್ಷಿಕ ಆದಾಯ ಪ್ರವರ್ಗ–1,ಎಸ್.ಸಿ,ಎಸ್‌ಟಿಯವರಿಗೆ2.50ಲಕ್ಷರೂ, 2ಎ, 2ಬಿ, 3ಎ, 3ಬಿ, ಮತ್ತು ಇತರೆದವರಿಗೆ 1 ಲಕ್ಷ ರೂ ಮೀರಬಾರದು. ಅರ್ಜಿ ಸಲ್ಲಿಸುವ ಕೊನೆಯ ದಿನ ಜುಲೈ 20 ಆಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ http://bcwd.karnataka.gov.in ಸಹಾಯವಾಣಿ ಸಂಖ್ಯೆ 8050770004, 8050770005ಗೆ ಸಂಪರ್ಕಿಸಬಹುದಾಗಿದೆ.

# ಸಂಪೂರ್ಣತಾ ಅಭಿಯಾನದ ಯಶಸ್ವಿಗೆ ಸಹಕರಿಸಿ: ಡಿಸಿ ಭೂಬಾಲನ್

**ತಾಳಿಕೋಟಿ :** ದೇಶದಲ್ಲಿ ಒಟ್ಟು 500 ತಾಲೂಕುಗಳನ್ನು ಅತಿ ಹಿಂದುಳಿದ ತಾಲೂಕುಗಳೆಂದು ಗುರುತಿಸಲಾಗಿದ್ದು ಅದರಲ್ಲಿ 14 ತಾಲೂಕುಗಳು ಕರ್ನಾಟಕ ರಾಜ್ಯದಲ್ಲಿವೆ ಇದರಲ್ಲಿ ತಾಳಿಕೋಟಿ ತಾಲೂಕು ಕೂಡಾ ಒಂದಾಗಿದೆ. ಈ ತಾಲೂಕನ್ನು ಮುಂದಿನ ಮೂರು ತಿಂಗಳ ಒಳಗಾಗಿ ಆರು ಸೂಚ್ಯಂಕ ಕಾರ್ಯಕ್ರಮದಡಿ ಅಭಿವೃದ್ಧಿಗೊಳಿಸುವ ಗುರಿ ಹೊಂದಲಾಗಿದೆ ಇದಕ್ಕೆ ಇಲಾಖೆಯ ಅಧಿಕಾರಿಗಳೊಂದಿಗೆ ಸಾರ್ವಜನಿಕರ ಸಹಕಾರವು ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಹೇಳಿದರು. ಪಟ್ಟಣದ ಶ್ರೀ ಸಂಗಮೇಶ್ವರ ಸಭಾಭವನದಲ್ಲಿ ಶುಕ್ರವಾರ ಜಿಲ್ಲಾ ಆಡಳಿತ.ಜಿಪಂ ವಿಜಯಪುರ. ಮತ್ತು ತಾಲೂಕಾಡಳಿತ ತಾಪಂ ತಾಳಿಕೋಟಿ ಇವರ ಸಹಯೋಗದಲ್ಲಿ ಮಹತ್ವಾಕಾಂಕ್ಷಿ ತಾಲೂಕು ಕಾರ್ಯಕ್ರಮದಡಿ ಹಮ್ಮಿಕೊಂಡ ಸಂಪೂರ್ಣತಾ ಅಭಿಯಾನ ಉತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇಂದು ಈ ಅಭಿಯಾನಕ್ಕೆ ಚಾಲನೆ ಕೊಡಲಾಗಿದೆ ಮೂರು ತಿಂಗಳ ಒಳಗಾಗಿ ಆರು ಸೂಚ್ಯಾಂಕಗಳಾದ ಆರೋಗ್ಯಕ್ಕೆ ಸಂಬಂಧಿಸಿದ ಮೂರು ಹಾಗೂ ಶಿಕ್ಷಣ ಕೃಷಿ ಮತ್ತು ಸಾಮಾಜಿಕ ಅಭಿವೃದ್ಧಿ ಹೀಗೆ ಒಟ್ಟು 6 ಸೂಚಕಗಳ ಮೇಲೆ ಗುರಿ ಇರಿಸಿ ಶೇ 100 ರಷ್ಟು ಅಭಿವೃದ್ಧಿಯನ್ನು ಸಾಧಿಸಲು



ಪ್ರಯತ್ನಿಸಲಾಗುವುದು ಎಂದರು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ರಿಷಿ ಆನಂದ ಮಾತನಾಡಿ ದೇಶಾದ್ಯಂತ ಮಹತ್ವಕಾಂಕ್ಷೆಯ ಜಿಲ್ಲೆಗಳಲ್ಲಿ ಆರು ಪ್ರಮುಖ ಸೂಚಕಗಳು ಮತ್ತು ಮಹತ್ವಕಾಂಕ್ಷಿಯ ತಾಲೂಕುಗಳಲ್ಲಿ ಆರು ಪ್ರಮುಖ ಸೂಚಕಗಳು ಸಂಪೂರ್ಣತೆಯನ್ನು ಸಾಧಿಸಲು ಸುಸ್ಥಿರ ಪ್ರಯತ್ನವನ್ನುಕೈಗೊಳ್ಳಲುನೀತಿಆಯೋಗವು ಜುಲೈ 3 ರಿಂದ ಸಪ್ಟಂಬರ್ 30ರವರೆಗೆ ಈ ಅಭಿಯಾನವನ್ನು ಹಮ್ಮಿಕೊಂಡಿದೆ ಅಭಿಯಾನದ ಯಶಸ್ವಿಗಾಗಿ ಸಂಬಂಧಿಸಿದ ನಮ್ಮ ಇಲಾಖೆ ಎಲ್ಲಾ ಅಧಿಕಾರಿಗಳು ಕ್ರಿಯಾಶೀಲತೆಯೊಂದಿಗೆ ಕೆಲಸ ಮಾಡಿ ಶೇ.100 ರ ಗುರಿ ಸಾಧನೆಗೆ ಶಕ್ತಿ ಮೀರಿ ಪ್ರಯತ್ನಿಸುತ್ತಾರೆ ಕಳೆದ ವರ್ಷದಲ್ಲಿ ಸಂಕಲ್ಪ ಸಪ್ತಾಹ ಆಯೋಜನೆ ಮಾಡಲಾಗಿತ್ತು ಇದರಲ್ಲಿ 39 ಸೂಚ್ಯಂಕಗಳನ್ನು ತೆಗೆದುಕೊಳ್ಳಲಾಗಿತ್ತು ಆದರೀಗ ಅದರಿಂದ ಕೇವಲ ಆರು ಸೂಚ್ಯಂಕಗಳನ್ನು 3 ತಿಂಗಳ ಒಳಗಾಗಿ ಸಾಧಿಸಲು ತೆಗೆದುಕೊಳ್ಳಲಾಗಿದೆ. ಇವುಗಳಲ್ಲಿ ಮೂರು ಆರೋಗ್ಯ ಇಲಾಖೆಗೆ ಒಂದು ಕೃಷಿ ಒಂದು ಮಹಿಳಾ ಮತ್ತುಮಕ್ಕಳ ಕಲ್ಯಾಣಇಲಾಖೆಹಾಗೂಒಂದುಸಾಮಾಜಿಕ ಅಭಿವೃದ್ಧಿಗೆ ಸಂಬಂಧಿಸಿದ್ದಾಗಿದೆ ಎಂದರು. ಜಿಲ್ಲಾ ಯೋಜನಾಧಿಕಾರಿ ಎನ್.ಕೆ. ಗೋಟೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಎಎನ್ ಫಲಾನುಭವಿಗಳಿಗೆ ಮಾತೃ ಸುರಕ್ಷಾ ಕಾರ್ಡ್ ಹಾಗೂ ಸುಕನ್ಯಾ ಸಮೃದ್ಧಿ ಯೋಜನೆ ಫಲಾನುಭವಿಗಳಿಗೆ ಪಾಸ್ ಬುಕ್ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಂಪೂರ್ಣತ ಅಭಿಯಾನದ ಪ್ರತಿಜ್ಞಾ ವಿಧಿ ಭೋದಿಸಲಾಯಿತು. ತಮದಡ್ಡಿ ಗ್ರಾಮದ ಪ್ರಗತಿಪರ ರೈತ ಕೃಷಿ ಪಂಡಿತ ಬಸನಗೌಡ ಕನಕರೆಡ್ಡಿ ಸಾವಯವ ಕೃಷಿಯ ಕುರಿತು ತಮ್ಮ ಅನುಭವ ಹಂಚಿಕೊಂಡರು. ವೇದಿಕೆಯಲ್ಲಿ ನೀತಿ ಆಯೋಗದ ಸಹಾಯಕ ನಿರ್ದೇಶಕಿ ಶ್ರೀಮತಿ ಬಬಿತಾ ಸೂರ್ಯವಂಶಿ. ಜಿಪಂ. ಮುಖ್ಯ ಯೋಜನಾಧಿಕಾರಿ ಎನ್. ಕೆ.ಗೋಟೆ. ಸಹಾಯಕ ಯೋಜನಾಧಿಕಾರಿ ಎ.ಬಿ. ಅಲ್ಲಾಪೂರ. ಸಿಡಿಪಿಓ ಸಿ.ಬಿ.ಕುಂಬಾರ.ಪಿಆರ್ಡಿ ಇಇ ನಬಿಲಾಲ. ಜಂಟಿ ಕೃಷಿ ನಿರ್ದೇಶಕ ರಾಜಶೇಖರ್ ವಿಲಿಯಮ್ಸ್. ಉಪ ಕೃಷಿ ನಿರ್ದೇಶಕ ಪ್ರಕಾಶ ಚೌವಾಣ. ತಹಸಿಲ್ದಾರ್ ಪ್ರೇಮಸಿಂಗ ಪವಾರ.ತಾಪಂ ಇಓ ಬಿ.ಆರ್.ಬಿರಾದಾರ. ಪುರಸಭೆ ಮುಖ್ಯಾಧಿಕಾರಿ ಮೋಹನ ಜಾಧವ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿ ಹಿರೇಗೌಡರ. ಬಿಇಓ ಬಿ.ಎಸ್.ಸಾವಳಗಿ. ತಾಲೂಕಾ ಆರೋಗ್ಯಾಧಿಕಾರಿ ಸತೀಶ ತಿವಾರಿ. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಉಮೇಶ ಲಮಾಣಿ. ಕೃಷಿ ಅಧಿಕಾರಿ ಸುರೇಶ ಭಾವಿಕಟ್ಟಿ.ಮಹೇಶ ಜೋಶಿ. ಪಶುವೈದ್ಯಾಧಿಕಾರಿ ಡಿ.ಬಿ. ರಾಠೋಡ. ಜಿಲ್ಲಾ ಹಾಗೂ ತಾಲೂಕ ಮಟ್ಟದ ಅಧಿಕಾರಿಗಳು ಇದ್ದರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷರು ಸದಸ್ಯರು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ತಾಳಿಕೋಟೆ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿಯರು ನಾಡಗೀತೆ ಹಾಡಿದರು. ಪಿಡಿಓ ಬಿ.ಎಮ್. ಸಾಗರ ಸ್ವಾಗತಿಸಿದರು. ಶಿಕ್ಷಕರಾದ ಅನಿಲಕುಮಾರ ಇರಾಜ್ ರಾಜು ವಿಜಾಪೂರ ಹಾಗೂ ಬಿ.ಹೀರೆಹೋಳಿ ನಿರೂಪಿಸಿದರು.

# ಚಿತ್ತವಾಡಗಿ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ 403 ನೇ ಮಾಸಿಕ ಶಿವಾನುಭವ ಕಾರ್ಯಕ್ರಮ




**ಹುನಗುಂದ :** ಸಮೀಪದ ಚಿತ್ತವಾಡಗಿ ಶ್ರೀ ಸು–ಕ್ಷೇತ್ರ ವೀರಭದ್ರೇಶ್ವರ ದೇವಸ್ಥಾನದಲ್ಲಿ ೪೦೩ನೇ ಶಿವಾನುಭವ ಕಾರ್ಯಕ್ರಮ ಜರುಗಿತು ಶ್ರೀ. ಮ.ನಿ.ಪ್ರ. ಶಂಕರರಾಜೇಂದ್ರ ಮಹಾಸ್ವಾಮಿಗಳು ಪ್ರಭು ಶಂಕರೇಶ್ವರ ಮಠ ಯರಿಗೋನಾಳ ಅಮೀನಗಡ ಇವರ ದಿವ್ಯ ಸಾನಿಧ್ಯದಲ್ಲಿ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕ ಶರಣಪ್ಪ ಸಿದ್ದಲಿಂಗಪ್ಪ ಬೀಳಗಿ ಹಾಗೂ ಚಂದ್ರಶೇಖರ ಇವರನ್ನು ಸತ್ಕರಿಸಿ ಗೌರವಿಸಲಾಯಿತು ಸನ್ಮಾನ ಸ್ವೀಕರಿಸಿ ಮಾತನಾಡಿದ ಸಿದ್ದಲಿಂಗಪ್ಪ ಬೀಳಗಿಯವರು ಸಮಾಜದಲ್ಲಿ ನಾವು ಒಳ್ಳೆಯ ವ್ಯಕ್ತಿಗಳಾಗ ಬೇಕಾದರೆ ಶಿವಾನುಭವ ಕಾರ್ಯಕ್ರಮ ಮನುಷ್ಯನಿಗೆ ಅತ್ಯವಶ್ಯಕವೆಂದು ಹೇಳಿದರು ಮತ್ತು ಇನ್ನೋರ್ವ ಅತಿಥಿಗಳಾಗಿ ಬಳಗಾನೂರಿನ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢಶಾಲೆಯ ಮುಖ್ಯಗುರುಗಳಾದ ಅಮರನಾಥ ಹಳ್ಳೂರ ಅವರು ನಮ್ಮ ಜೀವನವು ಸಾರ್ಥಕತೆಯನ್ನು ಹೊಂದಬೇಕಾದರೆ ಭಕ್ತಿ,ಭಯ,ನಯ, ವಿನಯ ಹಾಗೂ ದೇವಸ್ಥಾನಗಳ ಪರಿಚಯ ಅವಶ್ಯಕತೆ ಇದೆ. ಜೀವನದಲ್ಲಿ ಏನಾದರೂ ಸಾಧಿಸಬೇಕಾದರೆ ಸಂಸ್ಕಾರ ಮುಖ್ಯವೆಂದು ತಿಳುವಳಿಕೆ ನೀಡಿದರು ಕಾರ್ಯಕ್ರಮ ವನ್ನು ಗೌಡರ್ ರವರು ನಡೆಸಿದರೆ ವಂದನಾರ್ಪಣೆಯನ್ನು ಬಸವರಾಜ ಗೌಡರ್ ಶಿಕ್ಷಕರು ಸ.ಕಿ.ಪ್ರಾ.ಶಾಲೆ ಚಿತ್ತವಾಡಗಿ ಮಾಡಿದರು. ಬಸಯ್ಯ ಚಿತ್ತವಾಡಗಿ ಇವರು ಭಕ್ತಾದಿಗಳಿಗೆ ಸ್ವಾಗತ ಕೋರಿದರು.

# ಪೊಲೀಸ್ ಪ್ರಕರಣಗಳ ಇಳಿ ಮುಖಕ್ಕೆ ಶ್ರಮವಹಿಸಿ: ಲೋಕ ಅದಾಲತ್ ಸಭೆಯಲ್ಲಿ ನ್ಯಾಯಾದೀಶರ ಕರೆ

**ಹೊಸಪೇಟೆ (ವಿಜಯನಗರ) :** ನ್ಯಾಯಾಲಯದ ಸಭಾಂಗಣದಲ್ಲಿ ಜು.13ರಂದು ನಡೆಯಲಿರುವ ರಾಷ್ಟ್ರೀಯ ಲೋಕ ಅದಾಲತ್ ಕುರಿತಂತೆ ವಿಜಯನಗರ ಜಿಲ್ಲೆಯ ಪೊಲೀಸ್ ಅಧಿಕಾರಿಗಳೊಂದಿಗೆ ದಿನಾಂಕ: 03–07–24 ರಂದು ಪೂರ್ವಭಾವಿ ಸಭೆ ನ್ಯಾಯಾಲಯದಲ್ಲಿ ನಡೆಯಿತು.

ಸಭೆಯನ್ನು ಉದ್ಘಾಟಿಸಿ ಮಾತನಾಡಿದ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ್.ಎ.ನಂದಗಡಿ, ವಿಜಯನಗರ ಜಿಲ್ಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ. ಶ್ರೀಹರಿಬಾಬು ಬಿ.ಎಲ್.ಇವರ ನೇತೃತ್ವದಲ್ಲಿ ಜಿಲ್ಲೆಯ ಪೊಲೀಸ್ ಇಲಾಖೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯ ಹಾಗೂ ಅಭಿನಂದನಾರ್ಹ ಎಂದು ತಿಳಿಸಿದರು.

ಸಮಾಜದಲ್ಲಿ ಪೊಲೀಸರ ಪಾತ್ರ ಮೊದಲಾಗಿದ್ದು, ನಂತರದಲ್ಲಿ ನ್ಯಾಯಾಂಗ ಇಲಾಖೆಯ ಪಾತ್ರ ಇರುತ್ತದೆ.ಹಾಗಾಗಿ ಪೊಲೀಸರು ಬಹಳ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು ನ್ಯಾಯಾಧೀಶರು,ಲೋಕ ಅದಾಲತ್ನಲ್ಲಿ ಬಾಕಿ ಉಳಿದಿರುವ ಪೊಲೀಸ್ ಇಲಾಖೆಯು ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಹಾಗೂ ಪ್ರಕರಣಗಳ ಇಳಿಮುಖಕ್ಕಾಗಿ ಶ್ರಮವಹಿಸಬೇಕು ಎಂದು ತಿಳಿಸಿದರು.

ದೇಶದಲ್ಲಿ ಹೊಸದಾಗಿ ಜಾರಿಗೆ ಬಂದಿರುವ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, ಭಾರತೀಯ ನ್ಯಾಯ ಸಂಹಿತೆ ಮತ್ತು ಭಾರತೀಯ ಸಾಕ್ಷ ಅಧಿನಿಯಮಗಳನ್ನು ಪುನರ್ ರಚನೆ ಮಾಡಲಾಗಿದೆ.ಹಾಗಾಗಿ



ಪೊಲೀಸ್ ಇಲಾಖೆಗೆ ಕಷ್ಟವಾಗುವುದಿಲ್ಲಾ ಎಂದು ಜಿಲ್ಲಾ ನ್ಯಾಯಾಧೀಶರು ಅಭಿಪ್ರಾಯಪಟ್ಟರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್. ಮಾತನಾಡಿ, ಲೋಕ ಅದಾಲತ್ನಲ್ಲಿ ನ್ಯಾಯಾಧೀಶರ ಸೂಚನೆಗಳನ್ನು ಪಾಲಿಸಿ ಹೆಚ್ಚು ಪೊಲೀಸ್ ಪ್ರಕರಣಗಳನ್ನು ಇತ್ಯರ್ಥಪಡಿಸುವಲ್ಲಿ ಶ್ರಮವಹಿಸಲಾಗುವುದು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯಲ್ಲಿ ಜಿಲ್ಲೆಯು 4ನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಪ್ರಧಾನ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ ನಾಗಲಾಪುರ ಮಾತನಾಡಿ, ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆ ನಡುವೆ ಹೊಂದಾಣಿಕೆ ಕೊರತೆಯಿಂದ ಎನ್.ಬಿ.ಡಬ್ಲೂ ಹಾಗೂ ವಾರೆಂಟ್ಗಳನ್ನು ಸಮರ್ಪಕವಾಗಿ ಜಾರಿಗೊಳಿಸುತ್ತಿಲ್ಲಾ. ಇದರಿಂದ ಸಾಕಷ್ಟು ಪ್ರಕರಣಗಳು ಬಾಕಿ ಉಳಿದಿವೆ.ಪೊಲೀಸರು ಸಮರ್ಪಕವಾಗಿ ಎನ್.ಬಿ.ಡಬ್ಲೂ ಹಾಗೂ ವಾರೆಂಟ್ಗಳನ್ನು ಜಾರಿಗೊಳಿಸಬೇಕು ಎಂದು ಹೇಳಿದರು.

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಹೇಮಲತಾ.ಬಿ.ಹುಲ್ಲೂರು ಹಾಗೂ ಗೌರವಾನ್ವಿತ ಅಪರ ಹಿರಿಯ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್, ಗೌರವಾನ್ವಿತ ಪ್ರಧಾನ ಸಿವಿಲ್ ಹಾಗೂ ಗೌರವಾನ್ವಿತ ಅಪರ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಅಶೋಕ ಆರ್.ಎಚ್, ಗೌರವಾನ್ವಿತ 2ನೇ ಅಪರ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಸಂಜೀವಕುಮಾ.ಜಿ ಮತ್ತು 3ನೇ ಅಪರ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಚೈತ್ರ.ಜೆ, ಸಹಾಯಕ ಅಭಿಯೋಜಕ ರೇವಣಸಿದ್ದಪ್ಪ, ಹಾಗೂ ಜಿಲ್ಲೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲಿಂ ಮತ್ತು ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ತಾಲೂಕು ಕಾನೂನು ಸೇವಾ ಸಮಿತಿಯ ಸಹಾಯಕ ಎಸ್.ಬಿ.ಕಮತಗಿ ಉಪಸ್ಥಿತರಿದ್ದರು.

**ವರದಿ : ಶೇಖರ್ ಬಿ**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State